# ಕಠೋಪನಿಷತ್ತು



# ಕಠೋಪನಿಷತ್ತು



## ಪ್ರಸ್ತಾವನೆ :

ಉಪನಿಷತ್ತಿನಲ್ಲಿ ಬಹಳ ಪ್ರಸಿದ್ಧವಾದ, ಕೃಷ್ಣ ಯಜುರ್ವೇದದ ಕಠ ಎನ್ನುವ ಶಾಖೆಯಿಂದ ಬಂದಿರುವ, 'ಕಠ' ಎನ್ನುವ ಋಷಿ ಪರಂಪರೆಯಲ್ಲಿ ಅನುಷ್ಠಾನಕ್ಕೆ ಬಂದ ಉಪನಿಷತ್ತು ಈ ಕಾಠಕೋಪನಿಷತ್ತು. ಈ ಉಪನಿಷತ್ತನ್ನು ಉಳಿಸಿಕೊಂಡು ಬಂದವರು ' ಕಠ' ಎನ್ನುವ ಋಷಿ ಮನೆತನವಾದರೆ, ಈ ಉಪನಿಷತ್ತಿನ ನಿಜವಾದ ಋಷಿ ಯಮ ಮತ್ತು ನಚಿಕೇತ. ಶಿಷ್ಯನಾಗಿ ನಚಿಕೇತ ಹಾಕುವ ಪ್ರಶ್ನೆಗೆ ಯಮ ಕೊಡುವ ಉತ್ತರವೇ ಕಠೋಪನಿಷತ್ತು.

ಇಂದು ನಮಗೆ 'ಕಠ' ಎನ್ನುವ ಹೆಸರು ಬಹಳ ವಿಚಿತ್ರವಾಗಿ ಕಾಣಿಸಬಹುದು. ಇದು ವೇದಕಾಲದ ಋಷಿಯ ಹೆಸರು. ಇಂದು ವೇದಕಾಲದ ಋಷಿಗಳ ಹೆಸರು ರೂಢಿಯಲ್ಲಿಲ್ಲ. ಕೇಳುವುದಕ್ಕೆ ವಿಚಿತ್ರವಾಗಿದೆ ಎನಿಸುವ ಈ ಹೆಸರು ತುಂಬಾ ಅರ್ಥಪೂರ್ಣವಾಗಿದ್ದು, ನಮಗೆ ಆ ನಾಮದ ಹಿಂದಿರುವ ಅರ್ಥ ತಿಳಿಯದೇ ಇರುವುದರಿಂದ ಅದು ವಿಚಿತ್ರವೆನಿಸುತ್ತದೆ. ಸಂಸ್ಕೃತದ ' ಕಠ' ಎನ್ನುವ ದಾತುವಿನಿಂದ ಈ ಶಬ್ದ ನಿಷ್ಪನ್ನವಾಗಿದೆ. 'ಕಠ' ಎಂದರೆ ಜೀವನದಲ್ಲಿ ಪರಿಶ್ರಮಪಟ್ಟು ದುಡಿಯುವವರು ಎಂದರ್ಥ. ಈ ಉಪನಿಷತ್ತು ನಮಗೆ ಅರ್ಥವಾಗಬೇಕಾದರೆ ನಾವೂ ಕೂಡ ಸ್ವಲ್ಪ ' ಕಠ'ರಾಗಬೇಕು. ಅರ್ಥ ಮಾಡಿಕೊಳ್ಳಲೇಬೇಕು ಎನ್ನುವ ಹಠದಿಂದ ಪರಿಶ್ರಮಪಟ್ಟು ಅಧ್ಯಯನ ಮಾಡಬೇಕು.

ಇಂದಿನ ಸಾಮಾಜಿಕ ಜೀವನದಲ್ಲಿ ಸತ್ಯವನ್ನು ಯಥಾರ್ಥವಾಗಿ ತಿಳಿಯಬಯಸುವವರಿಗೆ ಕಾಠಕೋಪನಿಷತ್ತು ತುಂಬಾ ಸಹಾಯಕ. ಭಾರತೀಯ ತತ್ವಶಾಸ್ತ್ರದಲ್ಲಿ ಹೇಳಲಾದ - ಅತೀಂದ್ರಿಯವಾದ ವಸ್ತುಗಳು, ಕಣ್ಣಿಗೆ ಕಾಣದ ಸೂಕ್ಷ್ಮಲೋಕ, ಅಲ್ಲಿನ ಸುಖ-ದುಃಖದ ಅನುಭವ, ಅದನ್ನು ಅನುಭವಿಸಲು ಭೂಲೋಕದಿಂದ ಅಲ್ಲಿಗೆ ಹೋಗುವ ಜೀವ, ಆ ಜೀವನನ್ನು ನಿಯಂತ್ರಿಸುವ ದೇವರು ಇತ್ಯಾದಿಯನ್ನು ಇಂದು ನಿಜವೋ ಸುಳ್ಳೋ ಎಂದು ತಿಳಿದುಕೊಳ್ಳುವುದು ಕಷ್ಟವಾಗುತ್ತಿದೆ. ಇದರ ಜಿಜ್ಞಾಸೆಗೋಸ್ಕರವೇ ಮೀಸಲಾದ ಉಪನಿಷತ್ತು ಕಠೋಪನಿಷತ್ತು.

ಈ ಉಪನಿಷತ್ತಿನ ವಿಶೇಷವೆಂದರೆ ಇಲ್ಲಿ ಉತ್ತರ ಕೊಡುವವ ಯಮ. ಪರಲೋಕ ಅಸ್ತಿತ್ವವಿದ್ದರೆ ಮಾತ್ರ ಯಮನಿಗೆ ಅಸ್ತಿತ್ವ. ಸೂಕ್ಷ್ಮಲೋಕದ ಅಸ್ತಿತ್ವ, ಅಲ್ಲಿನ ಸುಖ-ದುಃಖವನ್ನು ಅರಿತ ಯಮನಲ್ಲಿ ಪ್ರಶ್ನೆ ಕೇಳುವವ ಭೂಲೋಕದ ಒಬ್ಬ ಪುಟ್ಟ ಬಾಲಕ. ಈ ಉಪನಿಷತ್ತಿನ ಪ್ರತಿಪಾದ್ಯ ದೇವತೆ ಮೋಕ್ಷ ನಿಯಾಮಕನಾದ ಭಗವಂತ. ಭಗವಂತ ನಮ್ಮನ್ನು ಸಂಸಾರದಲ್ಲಿ ಮಾತ್ರ ನಿಯಮಿಸುವುದೋ ಅಥವಾ ಮೊಕ್ಷದಲ್ಲೂ ಆತನ ನಿಯಂತ್ರಣವಿದೆಯೋ? ಮೋಕ್ಷಕ್ಕೆ ಹೋದ ಜೀವದ ಇರವು ಹೇಗಿರುತ್ತದೆ? ಮೋಕ್ಷಕ್ಕೆ ಹೋದ ಮೇಲೆ ಏನಾಗುತ್ತದೆ? ಇತ್ಯಾದಿ ನಚಿಕೇತನ ಮುಖ್ಯವಾದ ಪ್ರಶ್ನೆಗಳು. ಮುಗ್ಧ ಬಾಲಕನ ಪ್ರಶ್ನೆಗೆ ಯಮನ ಉತ್ತರವೇ ಈ ಕಠೋಪನಿಷತ್ತು.

ಇಲ್ಲಿ ಪ್ರಶ್ನೆ ಹಾಕುವ ಬಾಲಕನ ಹೆಸರು 'ನಚಿಕೇತ'. ನಚಿಕೇತ ಎನ್ನುವ ಶಬ್ದದ ಅರ್ಥ – ನ ಕಿಂಚಿತ್ ಚಿಕೇತಃ ಇತಿ ನಚಿಕೇತಃ. ಅಂದರೆ ಏನೂ ಮಾಡದವ ಎಂದರ್ಥ! ಈ ಅರ್ಥವನ್ನು ಕೇಳಿ ನಿಮಗೆ ಆಶ್ಚರ್ಯವಾಗಬಹುದು. ಏನೂ ಮಾಡದವನಿಗೆ ಯಮನೇಕೆ ಉಪದೇಶಕೊಟ್ಟ? ಈ ಪ್ರಶ್ನೆಗೆ ಉತ್ತರ ಸಿಗಬೇಕಾದರೆ ನಾವು ನಚಿಕೇತನ ಹಿನ್ನೆಲೆಯನ್ನು ತಿಳಿಯಬೇಕಾಗುತ್ತದೆ.

ವಾಜಶ್ರವಸ್ಸಿನ ಮಗಳು ಅರುಣಾ. ಅರುಣೆಯ ಮಗನಾದ ಉದ್ದಾಲಕ ಎನ್ನುವ ಋಷಿ ಕುಟುಂಬದಲ್ಲಿ ಹುಟ್ಟಿದವ ನಚಿಕೇತ. ಉದ್ದಾಲಕ ಮಹಾಜ್ಞಾನಿ. ಆದರೆ ಆತ ತನ್ನ ಮನಸ್ಸಿನ ಕಾಮ-ಕ್ರೋಧ-ಮೋಹವನ್ನು ಪೂರ್ತಿ ಬಿಡಲಾಗದೆ ಲೋಭಿಯಾಗಿದ್ದ. ಈ ಕಾರಣದಿಂದ ಆತ ತಪ್ಪು ಮಾಡುತ್ತಿದ್ದ. ಆತನಿಗೆ ಇಬ್ಬರು ಮಕ್ಕಳು. ಮೊದಲನೆಯವ ಶ್ವೇತಕೇತು ಹಾಗೂ ಎರಡನೇಯವ ನಚಿಕೇತ. ಚಿಕ್ಕವನಿದ್ದಾಗ ನಚಿಕೇತ ಬಹಳ ಮೌನಿಯಾಗಿದ್ದ. ಹಾಗಾಗಿ ಆತನ ತಂದೆ-ತಾಯಿ ಆತನ ಅಂತರಂಗದ ಬೆಳವಣಿಗೆಯನ್ನು ಗುರುತಿಸಲಿಲ್ಲ. ಏನೂ ಮಾಡದವನೆಂದು ತಿಳಿದು ಆತನನ್ನು ಗುರುಕುಲಕ್ಕೆ ಕಳುಹಿಸದೆ, ಮನೆಯಲ್ಲೇ ಇರಿಸಿಕೊಂಡರು. ಶಿಕ್ಷಣದಿಂದ ವಂಚಿತನಾದ ನಚಿಕೇತ ಮನೆಯಲ್ಲಿ ತಂದೆ ತಾಯಿ ಚಾಕರಿ ಮಾಡಿಕೊಂಡಿದ್ದ. ಇಂಥಹ ನಚಿಕೇತನೇ ಈ ಉಪನಿಷತ್ತಿನ ಒಬ್ಬ ಋಷಿ(ಶಿಷ್ಯ) ಹಾಗೂ ಯಮ ಉಪದೇಶ ಮಾಡಿದ ಇನ್ನೊಬ್ಬ ಋಷಿ(ಗುರು).

ಬನ್ನಿ, ಮೋಕ್ಷ ನಿಯಾಮಕನಾದ ಭಗವಂತನ ಕುರಿತಾಗಿರುವ ಈ ಕೃತಿಯನ್ನು ಆ ಭಗವಂತನ ಅನುಗ್ರಹ ಬೇಡಿ ನಮ್ಮ ಯೋಗ್ಯತೆ ಇದ್ದಷ್ಟು ಅರಿಯಲು ಪ್ರಯತ್ನಿಸೋಣ.

ಓಂ ಸಹ ನಾವವತು । ಸಹ ನೌ ಭುನಕ್ತು । ಸಹವೀರ್ಯಂ ಕರವಾವಹೈ ।
ತೇಜಸ್ವಿ ನಾವಧೀತಮಸ್ತು । ಮಾ ವಿದ್ವಿಷಾವಹೈ ॥ ಓಂ ಶಾಂತಿಃ ಶಾಂತಿಃ ಶಾಂತಿಃ ॥

## ಅಧ್ಯಾಯ-೧

## ವಲ್ಲೀ-೧

ಉಶನ್ ಹ ವೈ ವಾಜಶ್ರವಸಃ ಸರ್ವವೇದಸಂ ದದೌ ।
ತಸ್ಯ ಹ ನಚಿಕೇತಾ ನಾಮ ಪುತ್ರ ಆಸ ॥ ೧॥

ವಾಜಶ್ರವಸ್ಸು ಎನ್ನುವ ಋಷಿಯ ಮಗಳು ಅರುಣಿಯ ಮಗ ಉದ್ದಾಲಕ.(ಈತನನ್ನು ಔದ್ದಾಲಕಿ ಆರುಣಿ ಎಂದೂ ಕರೆಯುತ್ತಾರೆ.) ಈತನಿಗೆ ಶ್ವೇತಕೇತು ಮತ್ತು ನಚಿಕೇತ ಎನ್ನುವ ಇಬ್ಬರು ಪುತ್ರರಿದ್ದರು.[ಈ ಶ್ಲೋಕದಲ್ಲಿ 'ವಾಜಶ್ರವಸಃ' ಎನ್ನುವುದನ್ನು ಅನುವಾದಕಾರರು ಸಾಮಾನ್ಯವಾಗಿ 'ವಾಜಶ್ರವಸ್ಸಿನ ಮಗ-ನಚಿಕೇತ' ಎಂದು ತಪ್ಪಾಗಿ ಅನುವಾದಿಸುವುದನ್ನು ಕಾಣುತ್ತೇವೆ. ಆದರೆ ಅದು ಸರಿಯಲ್ಲ. ] ತತ್ವಚಿಂತನೆ, ಜಿಜ್ಞಾಸೆ, ಅನ್ನದಾನಕ್ಕೆ ಹೆಸರಾದ ವಾಜಶ್ರವಸ್ಸಿನ ಕುಟುಂಬದಲ್ಲಿ ಹುಟ್ಟಿಬೆಳೆದ ಉದ್ದಾಲಕ ಸಮಗ್ರ ಶಾಸ್ತ್ರಜ್ಞನಾಗಿದ್ದ. ಜ್ಞಾನಿಯಾಗಿದ್ದ ಈತ ಸ್ವರ್ಗದ 'ಬಯಕೆ'ಯಿಂದ ಒಂದು ಯಜ್ಞ ಮಾಡಿದ. ಮಹಾನ್ ಜ್ಞಾನಿಯೊಬ್ಬ ಫಲಾಪೇಕ್ಷೆಯಿಂದ ಕರ್ಮ ಮಾಡುವುದನ್ನು ಈ ಶ್ಲೋಕದಲ್ಲಿ "ಹ ವೈ" ಎನ್ನುವಲ್ಲಿ ಆಶ್ಚರ್ಯ ಸೂಚಕವಾಗಿ ಪ್ರಸ್ತುತಪಡಿಸಲಾಗಿದೆ.

ಶಾಸ್ತ್ರಕಾರರು ಹೇಳುವಂತೆ ನಾವು ಯಾವುದೇ ಪೂಜೆಯನ್ನಾಗಲಿ ಅಲ್ಪಫಲದ ಆಸೆಯಿಂದ ಮಾಡದೆ ಭಗವದ್ ಪ್ರೀತ್ಯರ್ಥವಾಗಿ ಮಾಡಬೇಕು. ಭಗವದ್ ಪ್ರೀತ್ಯರ್ಥವಾಗಿ ಮಾಡುವ ಕರ್ಮ ಎಲ್ಲಾ ಫಲಗಳನ್ನೊಳಗೊಂಡ 'ಭಗವಂತನ ಅನುಗ್ರಹ' ಎನ್ನುವ ಮಹಾಫಲವನ್ನು ಕೊಡುವಾಗ, ಅಲ್ಪ ಫಲದ ಆಸೆಯಿಂದ ಪೂಜೆ ಮಾಡಿದರೆ ಮಹಾಫಲವನ್ನು ಕಳೆದುಕೊಂಡಂತೆ. ಇಲ್ಲಿ ಜ್ಞಾನಿಯಾಗಿದ್ದ ಉದ್ದಾಲಕ ನಿಷ್ಕಾಮಕರ್ಮ ಮಾಡುವುದನ್ನು ಬಿಟ್ಟು, ಆಶ್ಚರ್ಯವೆಂಬಂತೆ ಫಲವನ್ನು ಬಯಸಿ 'ಸರ್ವವೇದಸ್' ಎನ್ನುವ ಯಜ್ಞ ಮಾಡಿದ. 'ವೇದಸ್' ಎಂದರೆ 'ಸಂಪತ್ತು'. 'ಸರ್ವವೇದಸ್' ಎಂದರೆ ತನ್ನಲ್ಲಿರುವ ಸರ್ವಸ್ವವನ್ನೂ ದಾನ ಮಾಡುವುದು. ಉದ್ದಾಲಕ ಇಂತಹ ಮಹಾನ್ ಯಜ್ಞವನ್ನು ಮಾಡುವಾಗಲೂ ಕೂಡ ಲೋಭತನದಿಂದ ಮಾಡಿದ!

तं ह कुमारं संतं दक्षिणासु नीयमानासु

ಶ್ರದ್ಧಾSSವಿವೇಶ ಸೋSಮನ್ಯತ ॥ ೨ ॥

ಪೀತೋದಕಾ ಜಗ್ಧತೃಣಾ ದುಗ್ಧದೋಹಾ ನಿರಿಂದ್ರಿಯಾಃ ।

ಅನಂದಾ ನಾಮ ತೇ ಲೋಕಾಸ್ತಾನ್ ಸ ಗಚ್ಛತಿ ತಾ ದದತ್ ॥ ೩ ॥

ಸಾಮಾನ್ಯವಾಗಿ ಕಾಡಿನಲ್ಲಿ ವಾಸಿಸುವ ಋಷಿಗಳ ಸಂಪತ್ತು-ಹಸುಗಳು. ಲೋಭದಿಂದಾಗಿ ಹಸುಗಳಲ್ಲಿ ಒಳ್ಳೆಯ ಹಸುಗಳನ್ನು ಬಿಟ್ಟು ಗೊಡ್ಡು ಹಸುಗಳನ್ನು ಉದ್ದಾಲಕ ದಾನ ಮಾಡುತ್ತಿದ್ದ. ಈ ದೃಶ್ಯವನ್ನು ಹೊರನೋಟಕ್ಕೆ ಮಂದ ಬುದ್ಧಿಯವನಂತೆ ಕಾಣುವ ಪುಣ್ಯಜೀವಿ-ಆತನ ಮಗ ನಚಿಕೇತ ನೋಡುತ್ತಿದ್ದ. ಮಾಹಾತ್ಮನಾದ ಆತನಿಗೆ ತನ್ನ ತಂದೆ ಮಾಡುತ್ತಿರುವ ತಪ್ಪಿನ ಅರಿವಾಗುತ್ತದೆ.

ಯಜ್ಞವೆಂಬ ಮಹತ್ಕಾರ್ಯ ಮಾಡಿ ಅಲ್ಲಿ ತನ್ನ ಲೋಭಕ್ಕೆ ವಶವಾಗಿರುವ ತಂದೆ ಅನ್ಯಾಯವಾಗಿ ಪಾಪ ಕಾರ್ಯವನ್ನು ಮಾಡುವುದನ್ನು ಕಂಡು ಆತ ಮರಗುತ್ತಾನೆ. ಚಿಕ್ಕವನಾದ್ದರಿಂದ ಆತನಿಗೆ ತಂದೆಗೆ ಬುದ್ಧಿವಾದ ಹೇಳಲು ಸಾಧ್ಯವಾಗುವುದಿಲ್ಲ. ಈ ರೀತಿ ದಾನ ಮಾಡಿದ್ದರಿಂದ ಪಾಪ ಬರುತ್ತದೆ ಎಂದು ಹೇಳುವ ಬದಲು "ನನ್ನನ್ನು ಯಾರಿಗಾದರೂ ದಾನ ಮಾಡು" ಎಂದು ಹೇಳುವುದಕ್ಕಾಗಿ ಆತ ತಂದೆಯ ಬಳಿ ಹೋಗುತ್ತಾನೆ.

ಸ ಹೋವಾಚ ಪಿತರಂ ತತ ಕಸ್ಮೈ ಮಾಂ ದಾಸ್ಯಸೀತಿ ।

ದ್ವಿತೀಯಂ ತೃತೀಯಂ ತಂ ಹೋವಾಚ ಮೃತ್ಯವೇ ತ್ವಾ ದದಾಮೀತಿ ॥ ೪ ॥

ತಂದೆಯ ಬಳಿ ಹೋದ ನಚಿಕೇತ ಹೇಳುತ್ತಾನೆ: "ಅಪ್ಪಾ, ಇದು ಸರ್ವಸ್ವವನ್ನೂ ದಾನ ಮಾಡುವ ಯಜ್ಞವಾಗಿರುವುದರಿಂದ ನನ್ನನ್ನು ಯಾರಿಗಾದರೂ ದಾನ ಮಾಡು. ನಾನು ಅವರ ಮನೆಯ ಚಾಕರಿ ಮಾಡಿಕೊಂಡು ಇದ್ದು ಬಿಡುತ್ತೇನೆ. ನನ್ನನ್ನು ದಾನ ಮಾಡಿದುದರ ಫಲ ನಿನಗೆ ಬರುತ್ತದೆ" ಎಂದು. ಈ ಹಿಂದೆ ಹೇಳಿದಂತೆ ನಚಿಕೇತನನ್ನು ಆತನ ತಂದೆ-ತಾಯಿ ಒಬ್ಬ ಬುದ್ಧಿಹೀನ ಹುಡುಗ ಎಂದು ತಿಳಿದಿದ್ದರು. ಆದ್ದರಿಂದ ಇಲ್ಲಿ ಆತನ ಮಾತನ್ನು ಉದ್ದಾಲಕ ಕಿವಿಗೊಡದೆ-ನಿರ್ಲಕ್ಷಿಸಿದ.

ತನ್ನನ್ನು ಗಮನಿಸದ ತಂದೆಯ ಬಳಿ ನಚಿಕೇತ: "ನನ್ನನ್ನು ಯಾರಿಗೆ ಕೊಡುತ್ತೀಯ ಅಪ್ಪಾ" ಎಂದು ಎರಡನೇ ಬಾರಿ ಕೇಳುತ್ತಾನೆ. ಇದನ್ನೂ ಉದ್ದಾಲಕ ಅಲಕ್ಷಿಸಿದಾಗ, ನಚಿಕೇತ ಮೂರನೇ ಬಾರಿ: "ಅಪ್ಪಾ –ನನ್ನನ್ನು ಯಾರಿಗೆ ದಾನ ಮಾಡುತ್ತೀಯ" ಎಂದು ಕೇಳುತ್ತಾನೆ. ಮಗ ಮೂರನೇ ಬಾರಿ ಈ ರೀತಿ ಕೇಳಿದಾಗ ಉದ್ದಾಲಕನಿಗೆ ಕೋಪ ಬರುತ್ತದೆ. ಕೋಪದ ಬರದಲ್ಲಿ ಆತ ಹೇಳುತ್ತಾನೆ: "ಮೃತ್ಯವೇ ತ್ವಾ ದದಾಮಿ" ಎಂದು.

ಅಂದರೆ "ನಿನ್ನನ್ನು ಮೃತ್ಯುವಿಗೆ(ಯಮನಿಗೆ) ಕೊಟ್ಟಿದ್ದೇನೆ" ಎಂದು. ಮೃತ್ಯುವಿಗೆ ದಾನ ಕೊಟ್ಟರೆ ಅಲ್ಲಿಗೆ ಈ ಸ್ಥೂಲ ಶರೀರದಿಂದ ಹೋಗಲು ಸಾಧ್ಯವಿಲ್ಲ. ದೇಹ ತ್ಯಜಿಸಿ ಸೂಕ್ಷ್ಮ ಶರೀರಿಯಾಗಿ ಮಾತ್ರ ಸೂಕ್ಷ್ಮಲೋಕ ಪಯಣ ಸಾಧ್ಯ. ನಮ್ಮಲ್ಲಿ ಪ್ರತಿಯೊಬ್ಬರ ಶರೀರದೊಳಗೂ ಒಂದು ಸೂಕ್ಷ್ಮ ಶರೀರವಿದೆ. ಅದನ್ನು ಅನಿರುದ್ಧ

ಶರೀರ ಎನ್ನುತ್ತಾರೆ. ಮನಃಶಾಸ್ತ್ರಜ್ಞರು ಇದನ್ನು  ಎಂದು ಕರೆಯುತ್ತಾರೆ. ಸ್ಥೂಲ ದೇಹದಿಂದ ನಾವು ಸೂಕ್ಷ್ಮಲೋಕವನ್ನು ಕಾಣಲು ಸಾಧ್ಯವಿಲ್ಲವಾದ್ದರಿಂದ ಇಲ್ಲಿ ಉದ್ದಾಲಕ ಹೇಳಿರುವ ಮಾತು "ನೀನು ಸತ್ತು ಹೋಗು" ಎನ್ನುವ ಶಾಪ!  ತಂದೆಯ ಬಾಯಿಯಿಂದ 'ಸಾಯಬೇಕು' ಎನ್ನುವ ಆದೇಶ ಬಂದಾಗ ನಚಿಕೇತ ಅದನ್ನು ಪಾಲಿಸಲು ತನ್ನ ಸ್ಥೂಲ ದೇಹವನ್ನು ತ್ಯಾಗಮಾಡಿ ಹೊರಟುಹೋದ.  [ವಿದೇಶದಲ್ಲಿ ಇತ್ತೀಚೆಗೆ ಸಂಮೋಹನ ವಿದ್ಯೆಯನ್ನು  ಪ್ರದರ್ಶಿಸುತ್ತಿದ್ದಾಗ ನಡೆದ ಒಂದು ಘಟನೆ ಈ ಮೇಲಿನ ಕಥೆಗೆ ಪೂರಕ. ಪ್ರದರ್ಶನದ ಒಂದು ಹಂತದಲ್ಲಿ ಸಂಮೋಹನ ಮಾಡುತ್ತಿದ್ದ ವ್ಯಕ್ತಿಯ ಮಾತನ್ನು ಸಂಮೋಹನಕ್ಕೊಳಗಾದ ವ್ಯಕ್ತಿ ತಕ್ಷಣ ಪಾಲಿಸಲಿಲ್ಲ. ಆಗ ಕೋಪಗೊಂಡ ಆತ ಎಂದು ಬಯ್ಯುತ್ತಾನೆ. ತಕ್ಷಣ  ಸಂಮೋಹನಕ್ಕೊಳಗಾದ ವ್ಯಕ್ತಿ ಅಲ್ಲೇ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾನೆ].

ಮುಂದಿನ ಶ್ಲೋಕಕ್ಕೆ ಹೋಗುವ ಮುನ್ನ ಇಲ್ಲಿ ನಚಿಕೇತನ ಕಥೆಯ ಬಗ್ಗೆ ಸ್ವಲ್ಪ ವಿಶ್ಲೇಷಣೆ ಮಾಡೋಣ. ನಚಿಕೇತನ ಕಥೆ ಕೇವಲ ಕಠೋಪನಿಷತ್ತಿನಲ್ಲಿ ಮಾತ್ರವಲ್ಲದೆ ತೈತ್ತಿರೀಯ ಬ್ರಾಹ್ಮಣ[೩-೧-೮], ಮಹಾಭಾರತ[ಅನುಶಾಸನ ಪರ್ವ] ಹಾಗೂ ಪುರಾಣದಲ್ಲಿ ಕೂಡ ಪ್ರಸ್ತಾಪವಾಗಿದೆ. ಒಂದನ್ನೊಂದು ತಾಳೆ ಹಾಕಿದಾಗ ನಮಗೆ ಅಲ್ಲಿ ಕೆಲವೊಂದು ಹೊಸ ವಿಷಯಗಳು, ಇನ್ನು ಕೆಲವು ವ್ಯತ್ಯಾಸಗಳು ಕಂಡು ಬರುತ್ತವೆ.

ನಾವು  ಎಲ್ಲವನ್ನೂ ಸಮಷ್ಟಿಯಾಗಿ ನೋಡಿದಾಗ ಮಾತ್ರ ನಮಗೆ ಕಥೆ ವಿಸ್ತಾರವಾಗಿ ಮತ್ತು ಪೂರ್ಣವಾಗಿ ತಿಳಿಯುತ್ತದೆ.  ಪ್ರಾಚೀನರು ಯಾವ ವಿಷಯವನ್ನೂ ಒಂದೇ ಕಡೆ ಬಿಡಿಸಿ ಹೇಳುತ್ತಿರಲಿಲ್ಲ. ಅವರು ತುಂಬಾ ಗೋಪ್ಯವಾದ ವಿಚಾರ ಕೇವಲ ಯೋಗ್ಯರಾದವರಿಗೆ ಮಾತ್ರ ಸಿಗಬೇಕು ಎನ್ನುವ ಉದ್ದೇಶದಿಂದ ಒಂದು ವಿಷಯವನ್ನು ಅನೇಕ ಗ್ರಂಥಗಳಲ್ಲಿ ಹುದುಗಿಡುತ್ತಿದ್ದರು. ಹಾಗಾಗಿ ನಾವು ಕೇವಲ ಒಂದು ಅಧ್ಯಾತ್ಮ ಗ್ರಂಥವನ್ನು ನೋಡಿದರೆ ನಮಗೆ ಆ ಕೃತಿಯ ಆಳ ಪೂರ್ಣವಾಗಿ ತಿಳಿಯುವುದಿಲ್ಲ. ಹೆಚ್ಚುಹೆಚ್ಚು ಅಧ್ಯಯನ ಮಾಡಿದಾಗ, ಭಗವದನುಗ್ರಹ ಇದ್ದಾಗ ಮಾತ್ರ ಸತ್ಯದ ಸ್ಫುರಣವಾಗುತ್ತದೆ.

ಇಲ್ಲಿ ಕಥೆ ಮುಂದುವರಿದು –ನಚಿಕೇತ ದೇಹತ್ಯಾಗ ಮಾಡಿ ಯಮಲೋಕಕ್ಕೆ ಹೋಗಿ ಅಲ್ಲಿ ಮೂರು ದಿನ ಆಹಾರ ಸೇವಿಸದೆ ಯಮನಿಗಾಗಿ ಕಾದ, ಅತಿಥಿಯನ್ನು ಕಾಯಿಸಿದ್ದಕ್ಕಾಗಿ ಯಮ ನಚಿಕೇತನಲ್ಲಿ "ಮೂರು ವರವನ್ನು ಕೇಳು"  ಎಂದು ಹೇಳಿದ ಎಂದಿದೆ. ಆದರೆ ತೈತ್ತಿರೀಯ ಬ್ರಾಹ್ಮಣದಲ್ಲಿ ಇದೇ ಕಥೆ ಸ್ವಲ್ಪ ಭಿನ್ನವಾಗಿದೆ. ದೇಹತ್ಯಾಗ ಮಾಡಿ ಮೃತ್ಯುಲೋಕಕ್ಕೆ ಹೊರಟ ನಚಿಕೇತನಿಗೆ ದಾರಿಯಲ್ಲಿ ವಾಗ್ದೇವತೆಯ ದರ್ಶನವಾಗುತ್ತದೆ. ಆಕೆ "ನಿನಗೆ ಮೂರು ದಿನ ಯಮನ ದರ್ಶನವಾಗುವುದಿಲ್ಲ, ನಿನ್ನನ್ನು ಕಾಯಿಸಿದ್ದಕ್ಕಾಗಿ ಯಮ ನಿನಗೆ ಮೂರು ವರವನ್ನು ಕೇಳು ಎಂದು ಹೇಳುತ್ತಾನೆ, ಆಗ- ಬಿಟ್ಟು ಬಂದ ದೇಹದಲ್ಲಿ ಮರಳಿ ಹುಟ್ಟುವಂತೆ, ಅಗ್ನಿವಿದ್ಯೆ ಪರಮಾತ್ಮನ ವಿದ್ಯೆಯಾಗಿ ಮೋಕ್ಷ ಸಾಧನವಾಗುವ ಅರಿವು ಕೊಡುವಂತೆ ಮತ್ತು ಮೋಕ್ಷದ ಇರವಿನ ಅರಿವು ತಿಳಿಸುವಂತೆ ವರ ಕೇಳು" ಎಂದು ತರಬೇತಿ ಕೊಟ್ಟು ಕಳುಹಿಸುತ್ತಾಳೆ ಎಂದಿದೆ. ಇದೇ ಕಥೆ ಮಹಾಭಾರತದಲ್ಲಿ ಇನ್ನೂ ಸ್ವಲ್ಪ ಭಿನ್ನವಾಗಿದೆ.

ಒಂದು ದಿನ ಉದ್ದಾಲಕ ಮಗನೊಂದಿಗೆ ಸ್ನಾನಕ್ಕಾಗಿ ನದಿ ತೀರಕ್ಕೆ ಹೋದ. ಅಲ್ಲಿಂದ ಮರಳುವಾಗ ಆತ ತನ್ನ ಸ್ನಾನದ ಕಲಶವನ್ನು ಮರೆತು ಬಂದ. ಮನೆಗ ಬಂದ ಮೇಲೆ ಇದನ್ನು ಗಮನಿಸಿದ ಆತ ತನ್ನ ಮಗ ನಚಿಕೇತನನ್ನು ಕರೆದು ನದಿ ತೀರಕ್ಕೆ ಹೋಗಿ ಮರೆತು ಬಂದ ಸ್ನಾನದ ಕಲಶವನ್ನು ತರುವಂತೆ ಹೇಳುತ್ತಾನೆ. ಆದರೆ ನಚಿಕೇತ ಕಲಶವನ್ನು ತರದೆ ಬರಿಗೈಯಲ್ಲಿ ಹಿಂದಿರುಗುತ್ತಾನೆ. ಈ ಕಾರಣದಿಂದಾಗಿ "ಮಗನಲ್ಲಿ ಸ್ವಲ್ಪವೂ ಜವಾಬ್ದಾರಿ ಇಲ್ಲ" ಎನ್ನುವ ಅಸಮದಾನ ಉದ್ದಾಲಕನಲ್ಲಿ ಮೂಡುತ್ತದೆ. ಇದಲ್ಲದೆ 'ಆ ಸಮಯದಲ್ಲಿ ಆತ ಹಸಿದಿದ್ದ' ಎನ್ನುತ್ತದೆ ಪುರಾಣ. ಇಂಥಹ ಸಂದರ್ಭದಲ್ಲಿ ನಚಿಕೇತ ಪದೇಪದೇ "ನನ್ನನ್ನು ಯಾರಿಗೆ ದಾನ ಕೊಡುತ್ತಿ" ಎಂದು ಕೇಳಿದ್ದರಿಂದ ಉದ್ದಾಲಕ ಕೋಪದಿಂದ "ಮೃತ್ಯುವಿಗೆ ದಾನ ಮಾಡಿದ್ದೇನೆ" ಎನ್ನುತ್ತಾನೆ.

ಮಹಾಭಾರತದಲ್ಲಿ ಹೇಳುವಂತೆ: ಯಮಲೋಕಕ್ಕೆ ಬಂದ ಪುಣ್ಯಜೀವಿ ನಚಿಕೇತನನ್ನು ಯಮ ಸತ್ಕರಿಸಿ ಯೋಗ-ಕ್ಷೇಮ ವಿಚಾರಿಸಿದ. 'ನಿನಗೇನುಬೇಕು' ಎಂದು ಕೇಳಿದ್ದಕ್ಕೆ "ಸೂಕ್ಷ್ಮಲೋಕವನ್ನೊಮ್ಮೆ ನೋಡಬೇಕು" ಎನ್ನುವ ತನ್ನ ಅಭಿಲಾಷೆಯನ್ನು ನಚಿಕೇತ ಯಮನ ಮುಂದಿಟ್ಟ. ಅತನ ಬಯಕೆಯನ್ನು ಪುರಸ್ಕರಿಸಿದ ಯಮ ಆತನನ್ನು ರಥದಲ್ಲಿ ಕುಳ್ಳಿರಿಸಿ, ಸೂಕ್ಷ್ಮಲೋಕ ವೀಕ್ಷಣೆಗೆ ಕಳುಹಿಸಿಕೊಟ್ಟ. ಎಲ್ಲವನ್ನೂ ನೋಡಿ ಬಂದ ಮೇಲೆ ಯಮ ನಚಿಕೇತನಲ್ಲಿ "ನಿನ್ನ ಆಯಸ್ಸು ಇನ್ನೂ ಮುಗಿದಿಲ್ಲ, ತಂದೆಯ ಆಜ್ಞೆ ಪಾಲಿಸುವುದಕ್ಕೋಸ್ಕರ ಬಂದಿರುವ ನೀನು, ಮರಳಿ ಹೋಗು" ಎಂದು ಹೇಳಿ ಕಳುಹಿಸಿ ಕೊಟ್ಟನಂತೆ. ಹೀಗೆ ಕಳುಹಿಸುವಾಗ ಯಮ "ಗೋದಾನ ಬಹಳ ವಿಶೇಷವಾದದ್ದು, ಅದನ್ನು ಲೋಭದಿಂದ ಮಾಡಿ ವ್ಯರ್ಥ ಮಾಡಬೇಡ" ಎನ್ನುವ ಸಂದೇಶವನ್ನು ಉದ್ದಾಲಕನಿಗೆ ಕಳುಹಿಸಿಕೊಟ್ಟ ಎಂದಿದೆ. ಇದು ಕಥೆ.

ಕಥೆಯಲ್ಲಿ ಹೇಳಲಾದ 'ಮೂರು ದಿನಗಳು' ಕೇವಲ ನಚಿಕೇತನ ಅಂತರ್ದೃಷ್ಟಿಯಲ್ಲಿ ಮೂಡಿ ಬಂದ ಮೂರು ದಿನಗಳೇ ಹೊರತು ಇದು ದೇವಲೋಕದ ಅಥವಾ ಭೂಲೋಕದ ಮೂರು ದಿನಗಳಲ್ಲ. ಏಕೆಂದರೆ ದೇವಲೋಕದ ಮೂರು ದಿನ ಎಂದರೆ ನಮ್ಮ ಮೂರು ವರ್ಷ. ಸತ್ತ ಮಗನ ಶರೀರವನ್ನು ಮುಂದಿಟ್ಟುಕೊಂಡು ಉದ್ದಾಲಕ ರಾತ್ರಿಯೆಲ್ಲಾ ಪಶ್ಚಾತ್ತಾಪಪಟ್ಟ, ಮುಂಜಾನೆ ಸತ್ತ ಮಗ ಜೀವಂತವಾಗಿ ಎದ್ದು ನಿಂತ ಎಂದು ಒಂದು ಕಡೆ ಹೇಳಿರುವುದರಿಂದ, ನಚಿಕೇತನ ಸೂಕ್ಷ್ಮಲೋಕದ ಪಯಣ ಕೇವಲ ಕೆಲವು ಘಳಿಗೆಯಷ್ಟಾಗಿತ್ತು ಎನ್ನುವುದು ಇಲ್ಲಿ ಸ್ಪಷ್ಟ. ನಮ್ಮ ಒಳಗಿನ ನೋಟಕ್ಕೆ ಸಮಯದ ಅಪೇಕ್ಷೆ ಇಲ್ಲ. ಒಂದು ಕ್ಷಣದಲ್ಲಿ ಹತ್ತಾರು ದಿನದ ಕಥೆಯನ್ನು ಅಂತರ್ದೃಷ್ಟಿಯಲ್ಲಿ ಕಾಣಬಹುದು. ಇಲ್ಲಿ ನಚಿಕೇತನಿಗಾಗಿರುವುದು ಅಂತಃದರ್ಶನ. ಬನ್ನಿ, ಈ ಎಲ್ಲಾ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಶ್ಲೋಕಗಳನ್ನು ನೋಡೋಣ.

ಬಹೂನಾಮೇಮಿ ಪ್ರಥಮೋ ಬಹೂನಾಮೇಮಿ ಮಧ್ಯಮಃ ।
ಕಿಂ ಸ್ವಿದ್ಯಮಸ್ಯ ಕರ್ತವ್ಯಂ ಯನ್ಮಯಾSದ್ಯ ಕರಿಷ್ಯತಿ ॥೫॥

"ನಿನ್ನನ್ನು ಮೃತ್ಯುವಿಗೆ ದಾನ ಮಾಡಿದ್ದೇನೆ ಅಲ್ಲಿಗೆ ಹೋಗು" ಎನ್ನುವ ತಂದೆಯ ಕೋಪದ ಮಾತನ್ನು ನಚಿಕೇತ ಆದೇಶವಾಗಿ ಸ್ವೀಕರಿಸಿ, ಸ್ಥೂಲ ದೇಹವನ್ನು ತೊರೆದು ಪರಲೋಕದತ್ತ ತನ್ನ ಸೂಕ್ಷ್ಮಶರೀರದ

ಮೂಲಕ ಪಯಣಿಸುತ್ತಾನೆ. ಹೀಗೆ ಸಾಗುವಾಗ ಆತನ ಹಿಂದೆ ಆತನ ನಂತರ ಸತ್ತವರು ಹಾಗೂ ಆತನಿಗಿಂತ ಮುಂದೆ ಆತನಿಗಿಂತ ಮೊದಲು ಸತ್ತ ಜೀವಗಳ ಪ್ರವಾಹವೇ ಸಾಗುತ್ತಿತ್ತು. ಆತನ ಹಿಂದಿರುವ ಜೀವಗಳ ಮುಂದಾಳಾಗಿ, ಆತನಿಗಿಂತ ಮುಂದಿರುವ ಜೀವಗಳ ಗುಂಪಿನಲ್ಲಿ ಒಬ್ಬನಾಗಿ ನಚಿಕೇತ ಪರಲೋಕದತ್ತ ತೆರಳುತ್ತಿದ್ದ. ಹೀಗೆ ಸಾಗುತ್ತಿದ್ದ ಆತನಿಗೆ ತನ್ನ ತಂದೆಯ ಮೇಲೆ ಯಾವುದೇ ಕೊಪವಿರಲಿಲ್ಲ. ತಾನು ಚಿಕ್ಕ ವಯಸ್ಸಿನಲ್ಲೇ ಸಾಯಬೇಕಾಗಿ ಬಂತಲ್ಲಾ ಎನ್ನುವ ದುಃಖವೂ ಇರಲಿಲ್ಲ. ಆದರೆ ತಂದೆ ನನ್ನನ್ನು ಯಮನಿಗೆ ದಾನವಾಗಿ ಕೊಟ್ಟು ಈ ದಾನವನ್ನೂ ವ್ಯರ್ಥ ಮಾಡಿದನಲ್ಲ ಎನ್ನುವ ಬೇಸರವಿತ್ತು. ಏಕೆಂದರೆ ಒಂದು ವೇಳೆ ಇನ್ಯಾರಿಗೋ ದಾನ ಮಾಡುತ್ತಿದ್ದರೆ ನಚಿಕೇತ ಅವರ ಸೇವೆ ಮಾಡಿಕೊಂಡು ಬದುಕುತಿದ್ದ ಮತ್ತು ಅದರ ಪುಣ್ಯ ತಂದೆಗೆ ಸೇರುತ್ತಿತ್ತು. ಆದರೆ ಇಲ್ಲಿ ಯಮನಿಗೆ ದಾನ ಮಾಡಿರುವುದರಿಂದ ಯಮನಿಗೆ ತನ್ನಿಂದ ಯಾವ ಉಪಯೋಗವೂ ಇಲ್ಲ, ಆದ್ದರಿಂದ ಈ ದಾನವೂ ವ್ಯರ್ಥವಾಯಿತಲ್ಲ ಎನ್ನುವುದು ಆತನ ಚಿಂತನೆ.

ಅನುಪಶ್ಯ ಯಥಾ ಪೂರ್ವೇ ಪ್ರತಿಪಶ್ಯ ತಥಾSಪರೇ ।
ಸಸ್ಯಮಿವ ಮರ್ತ್ಯಃ ಪಚ್ಯತೇ ಸಸ್ಯಮಿವಾಜಾಯತೇ ಪುನಃ ೬ ॥

ಯಮಲೋಕದತ್ತ ಸಾಗುತ್ತಿರುವ ನಚಿಕೇತ ಯಮಧೂತರ ಮಾತುಗಳನ್ನೂ ಕೇಳಿಸಿಕೊಳ್ಳುತ್ತಾನೆ. ಅವರು ಹೇಳುತ್ತಾರೆ: ಪಾಪಿಗಳು ಯಮಲೋಕದಲ್ಲಿ ಯಾವ ರೀತಿ ಯಾತನೆ ಅನುಭವಿಸುತ್ತಾರೆ ಅನ್ನುವುದನ್ನು ಅನುಭವಿಸಿ ನೋಡು" ಎಂದು. "ಹಿಂದೆ ಬಂದವರು ಅನುಭವಿಸಿದ್ದೂ ಇದನ್ನೇ, ಮುಂದೆ ಬರುವವರು ಅನುಭವಿಸುವುದೂ ಇದನ್ನೆ. ಸಸ್ಯವನ್ನು(ತರಕಾರಿಯನ್ನು) ಹೇಗೆ ಪಾತ್ರೆಯಲ್ಲಿ ಹಾಕಿ ಕುದಿಸುತ್ತಾರೆ, ಹಾಗೆ ಪಾಪಿಗಳನ್ನು ನರಕದ ಕುಂಡದಲ್ಲಿ ಕುದಿಸುತ್ತಾರೆ. ಅವರು ಈ ರೀತಿ ದುಃಖದಲ್ಲಿ ಬೆಂದು, ದುಃಖವನ್ನು ಅನುಭವಿಸಿ ಪಕ್ವವಾಗಿ ಪುನಃ ಭೂಮಿಯಲ್ಲಿ ಹುಟ್ಟುತ್ತಾರೆ".

ವೈಶ್ವಾನರಃ ಪ್ರವಿಶತ್ಯತಿಥಿರ್ಬ್ರಾಹ್ಮಣೋ ಗೃಹಾನ್ ।
ತಸ್ಯೈತಾಂ ಶಾಂತಿಂ ಕುರ್ವಂತಿ ಹರ ವೈವಸ್ವತೋದಕಂ ॥೭॥

ಹಿಂದೆ ಹೇಳಿದಂತೆ ಯಮಲೋಕವನ್ನು ತಲುಪಿದ ನಚಿಕೇತನಿಗೆ ತಕ್ಷಣ ಯಮನ ದರ್ಶನ ಆಗುವುದಿಲ್ಲ. ಜ್ಞಾನಿಯಾದ ನಚಿಕೇತನನ್ನು ಯಮನ ಪತ್ನಿ ಉಪಚರಿಸುತ್ತಾಳೆ. ಆದರೆ ನಚಿಕೇತ ಯಮನ ದರ್ಶನ ಆಗುವ ತನಕ ಯಾವುದೇ ಆಹಾರವನ್ನು ಸ್ವೀಕರಿಸುವುದಿಲ್ಲ. ಈ ರೀತಿ ಕಾಯುತ್ತಿರುವಾಗ ಯಮನ ಆಗಮನವಾಗುತ್ತದೆ. ಹೀಗೆ ಬಂದ ಯಮನಲ್ಲಿ ಯಮನ ಪತ್ನಿ ಹೇಳುತ್ತಾಳೆ: "ಹಸಿದು ಬಂದ ಒಬ್ಬ ಬ್ರಹ್ಮ ಜ್ಞಾನಿ ನಮ್ಮ ಮನೆ ಮುಂದೆ ಉಪವಾಸ ಕೂತಿದ್ದಾನೆ. ತನ್ನ ಹೊಟ್ಟೆಯಲ್ಲಿ ವೈಶ್ವಾನರ(ಬೆಂಕಿ, ಅಗ್ನಿ ನಾರಾಯಣ) ನನ್ನು ಹೊತ್ತು ಬಂದಿರುವ ಅತಿಥಿಯ ಹಸಿವನ್ನು ಮೊದಲು ಹಿಂಗಿಸು. ಇಲ್ಲದಿದ್ದರೆ ನಮ್ಮ ಇಡೀ ದೇವಲೋಕ ಬಸ್ಮವಾದೀತು" ಎಂದು. ಇಲ್ಲಿ ಅತಿಥಿ ಎಂದರೆ ಆಕಸ್ಮಿಕವಾಗಿ ಹಸಿದು ಆಹಾರ ಬಯಸಿ ಬರುವವರು.

ಇವರಿಗೆ ತಿಥಿ (ದಿನಾಂಕ ಅಥವಾ ಸಮಯ) ಇಲ್ಲ. [ನಾವು ಕರೆದಾಗ ಬರುವವರು, ನೆಂಟರಿಷ್ಟರು ಅತಿಥಿಗಳಲ್ಲ ಅವರು ಅಭ್ಯಾಗತರು]. ಹಿಂದೆ ಇಂದಿನ ರೀತಿ ವಸತಿಗೃಹ, ಉಪಹಾರ ಗೃಹಗಳಿರಲಿಲ್ಲ. ಪ್ರತಿಯೊಂದು ಮನೆಯಲ್ಲಿ ಹಸಿದು ಬರುವವನಿಗೆ ಅನ್ನ-ನೀರು ಕೊಡುವ ಅದ್ಭುತ ಸಂಪ್ರದಾಯ ಈ ದೇಶದಲ್ಲಿತ್ತು. ಶಾಸ್ತ್ರಕಾರರ ಪ್ರಕಾರ ಯಾರೇ ಹಸಿದವರು ಬಂದರೂ ನಾವು ಅವರ ಹೊಟ್ಟೆ ತಣಿಸದೆ ಕಳುಹಿಸಬಾರದು. ಅವನ ಕುಲ ಗೋತ್ರ ಯಾವುದೂ ಇಲ್ಲಿ ಪ್ರಮುಖವಲ್ಲ, ಹಸಿದು ಬಂದವ ಅತಿಥಿ ಅಷ್ಟೇ. "ಹಸಿದು ಬಂದವನ ಹಸಿವನ್ನು ತಣಿಸದಿದ್ದರೆ ಆತನ ಹೊಟ್ಟೆಯಲ್ಲಿನ ಬೆಂಕಿ ನಿನ್ನ ಮನೆಯನ್ನು ಸುಡುತ್ತದೆ" ಎನ್ನುವುದು ನಮ್ಮ ಪ್ರಾಚೀನರು ಕಂಡುಕೊಂಡ ಸತ್ಯವಾಗಿತ್ತು.

ಅತಿಥಿ ರೂಪದಲ್ಲಿ ಭಗವಂತ ಬೆಂಕಿಯಾಗಿ ಮನೆಗೆ ಬಂದಾಗ ಮೊದಲು ಮೂರು ಬಗೆಯ ನೀರನ್ನು ಕೊಟ್ಟು ಬೆಂಕಿಯನ್ನು ಶಾಂತಗೊಳಿಸಬೇಕು. ಕೈ ತೊಳೆಯುವ ನೀರು ಅರ್ಘ್ಯ, ಕಾಲು ತೊಳೆಯುವ ನೀರು ಪಾದ್ಯ ಮತ್ತು ಕುಡಿಯುವ ನೀರು ಆಚಮನ. ಇಲ್ಲಿ ಒಬ್ಬ ಜ್ಞಾನಿ ಅತಿಥಿಯಾಗಿ ಬಂದು ಯಮನಿಗಾಗಿ ಕಾದು ಕುಳಿತಿದ್ದಾನೆ. ಅದಕ್ಕಾಗಿ ಯಮನ ಹೆಂಡತಿ ಕಾದು ಕುಳಿತಿರುವ ಅತಿಥಿಯ ಸತ್ಕಾರ ಮಾಡಿ ಆತನ ಹೊಟ್ಟೆಯಲ್ಲಿನ ಅಗ್ನಿಯನ್ನು ತಣಿಸು" ಎಂದು ವಿವಸ್ವತನ(ಸೂರ್ಯನ) ಮಗನಾದ ಯಮನಿಗೆ ಹೇಳುತ್ತಾಳೆ.[ಕೆಲವು ಅನುವಾದಕಾರರು ಈ ಮಾತನ್ನು ಯಮನ ಮಂತ್ರಿಗಳು ಹೇಳಿದರು ಎಂದು ಬರೆಯುತ್ತಾರೆ. ಆದರೆ ಹಿಂದೆ ಹೇಳಿದಂತೆ ನಾವು ಮಹಾಭಾರತ, ತೈತ್ತಿರೀಯ ಬ್ರಾಹ್ಮಣ ಮತ್ತು ಪುರಾಣದಲ್ಲಿ ಬರುವ ನಚಿಕೇತನ ಕಥೆಯನ್ನು ಸಮಷ್ಟಿಯಾಗಿ ನೋಡಿದಾಗ ಈ ಮಾತನ್ನು ಯಮನ ಪತ್ನಿ ಶ್ಯಾಮಲ ಹೇಳಿರುವುದು ಸ್ಪಷ್ಟವಾಗುತ್ತದೆ].

ಆಶಾಪ್ರತೀಕ್ಷೇ ಸಂಗತಂ ಸೂನೃತಾಂ ಚೇಷ್ಟಾಪೂರ್ತೇ ಪುತ್ರಪಶೂಂಶ್ಚ ಸರ್ವಾನ್ ।
ಏತದ್ವೃಂಕ್ತೇ ಪುರುಷಸ್ಯಾಲ್ಪಮೇಧಸೋ ಯಸ್ಯಾನಶ್ನನ್ ವಸತಿ ಬ್ರಾಹ್ಮಣೋ ಗೃಹೇ ॥೮॥

ಹಸಿದು ಬಂದ ಅತಿಥಿಯನ್ನು ಸತ್ಕರಿಸದೆ ತಿರಸ್ಕರಿಸುವುದರ ಪರಿಣಾಮ ಏನು ಎನ್ನುವುದನ್ನು ಈ ಶ್ಲೋಕದಲ್ಲಿ ಯಮನ ಪತ್ನಿ ವಿವರಿಸುತ್ತಾಳೆ. "ಒಂದು ವೇಳೆ ಅತಿಥಿಯನ್ನು ಬೈದು ಕಳುಹಿಸಿದರೆ ನಿಮ್ಮ ಆಶಾ ಪ್ರತೀಕ್ಷಗಳು ಮಣ್ಣುಪಾಲಾಗುತ್ತವೆ, ಗೆಳೆಯರು ನಿಮ್ಮಿಂದ ದೂರವಾಗುತ್ತಾರೆ, ಯಾರೂ ನಿನ್ನನ್ನು ನೋಡಿ ಒಳ್ಳೆಯ ಮಾತನಾಡುವುದಿಲ್ಲ. ನಿಮ್ಮ ಇಷ್ಟಾ-ಪೂರ್ತಾ-ಸರ್ವಸ್ವವೂ ನಾಶವಾಗುತ್ತದೆ" ಎನ್ನುತ್ತಾಳೆ ಆಕೆ. ಇಲ್ಲಿ 'ಇಷ್ಟಾ' ಎಂದರೆ ನಮ್ಮ ಬೆಳವಣಿಗೆಗಾಗಿ ನಾವು ಮಾಡುವ ಕ್ರಿಯೆ ಮತ್ತು 'ಪೂರ್ತಾ' ಎಂದರೆ ಸಮಾಜದ ಋಣವನ್ನು ತೀರಿಸುವುದಕ್ಕೋಸ್ಕರ ಮಾಡುವ ಕ್ರಿಯೆ.

ಒಟ್ಟು ಆರು ಇಷ್ಟಗಳು ಹಾಗೂ ಆರು ಪೂರ್ತಗಳನ್ನು ಶಾಸ್ತ್ರಕಾರರು ಪಟ್ಟಿ ಮಾಡಿದ್ದಾರೆ. "ಅಗ್ನಿಹೋತ್ರಂ ತಪಃ ಸತ್ಯಂ ವೇದಾನಾಂಚಾನುಪಾಲನಂ ಆತಿಥ್ಯಂ ವೈಶ್ವಾದೇವಂ ಚ ಇಷ್ಟಂ ಇತಿ ಅಭಿಧೀಯತೆ" (೧) ನಿತ್ಯ ಅಗ್ನಿ ಮುಖದಲ್ಲಿ ಆರಾಧನೆ (ಅಗ್ನಿಹೋತ್ರ), (೨) ಉಪವಾಸ, ಬ್ರಹ್ಮಚರ್ಯ, ಇತ್ಯಾದಿ ನೈಷ್ಠಿಕ ಜೀವನ ಬದುಕುವುದು(ತಪಃ), (೩) ಪ್ರಾಮಾಣಿಕವಾದ ಬದುಕು(ಸತ್ಯ), (೪) ನಿರಂತರ ವೇದಾಧ್ಯಯನ ಹಾಗೂ ವೇದೋಕ್ತ ಕರ್ಮಾನುಷ್ಠಾನ, (೫) ಹಸಿದವರಿಗೆ ಅನ್ನ ನೀಡಿ ಸತ್ಕರಿಸುವುದು (ಆತಿಥ್ಯ), (೬) ದೇವತೆಗಳ ಆತಿಥ್ಯ ಇವು ಆರು ಇಷ್ಟಗಳು.

ಹಾಗೆ (೧) ಸಮಾಜದ ಉಪಯೋಗಕ್ಕಾಗಿ  ಬಾವಿ ತೊಡಿಸುವುದು, (೨) ಇಳಿಬಾವಿಯನ್ನು ಕಟ್ಟುವುದು, (೩) ಸ್ನಾನದ ಕೆರೆಯನ್ನು ಕಟ್ಟುವುದು, (೪) ಊರಿನ ಕ್ಷೇಮಕ್ಕೋಸ್ಕರ ದೇವಸ್ಥಾನ ಕಟ್ಟುವುದು, (೫) ಸಾರ್ವಜನಿಕ ಅನ್ನದಾನ ಮತ್ತು (೬) ಗಿಡ ಮರಗಳನ್ನು ಬೆಳೆಸುವುದು- ಇವು ಆರು ಪೂರ್ತಗಳು. ಇಲ್ಲಿ ಯಮನ ಪತ್ನಿ ಹೇಳುತ್ತಾಳೆ: "ಒಂದು ವೇಳೆ ಅತಿಥಿಯನ್ನು ತಿರಸ್ಕರಿಸಿದರೆ ಅದರಿಂದ ಇಷ್ಟಾ ಮತ್ತು ಪೂರ್ತಾದ ಎಲ್ಲಾ ಪುಣ್ಯ ಫಲಗಳೂ ನಷ್ಟವಾಗುತ್ತದೆ" ಎಂದು.

ತಿಸ್ರೋ ರಾತ್ರೀರ್ಯದವಾತ್ಸೀರ್ಗೃಹೇ ಮೇSನಶ್ನನ್ ಬ್ರಹ್ಮನ್ನತಿಥಿರ್ನಮಸ್ಯಃ ।
ನಮಸ್ತೇSಸ್ತು ಬ್ರಹ್ಮನ್ ಸ್ವಸ್ತಿ ಮೇSಸ್ತು  ತಸ್ಮಾತ್ಪ್ರತಿ ತ್ರೀನ್ವರಾನ್ವೃಣೀಷ್ವ  ॥೯॥

ತನಗಾಗಿ ಅನ್ನ  ನೀರನ್ನು ಬಿಟ್ಟು ಕಾಯುತ್ತಿದ್ದ ನಚಿಕೇತನನ್ನು ಕುರಿತು ಯಮ ಹೇಳುತ್ತಾನೆ: "ತಂದೆಯ ಅಣತಿಯಂತೆ ನನ್ನನ್ನು ಕಾಣಲು ಬಂದ ನೀನು ನನಗೆ ಅತಿಥಿ. ಹೀಗಿರುವಾಗ ಅತಿಥಿಯನ್ನು ಮೂರು ದಿನ ಕಾಯಿಸಿದ ಪಾಪ ನನಗೆ ಬಂತು" ಎಂದು. "ನನ್ನ ಗೃಹದಲ್ಲಿ ನನ್ನ ಅತಿಥಿಯಾಗಿ ಉಪವಾಸ ಕುಳಿತ ನಮಸ್ಕಾರ ಯೋಗ್ಯ  ಜ್ಞಾನಿ ನೀನು, ನಮ್ಮಿಂದ ಅದೆಷ್ಟು ದೊಡ್ಡ ಅಪರಾಧವಾಗಿ ಹೋಗಿದೆ, ನಿನ್ನ ಕಾಲಿಗೆ ಬಿದ್ದು  ಕ್ಷಮೆ ಕೇಳಬೇಕು ನಾವು, ನಿನಗೆ ನನ್ನ ನಮಸ್ಕಾರ" ಎನ್ನುತ್ತಾನೆ ಯಮ.

ಎಷ್ಟು ದೊಡ್ಡ ಮಾತು! ಪುಣ್ಯ ಪಾಪಗಳ ನಿರ್ಣಯ ಮಾಡಿ ಪಾಪಿಗಳಿಗೆ ದುಃಖವನ್ನೂ ಪುಣ್ಯಜೀವಿಗಳಿಗೆ ಸುಖವನ್ನೂ ಕೊಡುವ, ಲೋಕದ ಸುಖ ದುಃಖಗಳ ನಿಯಾಮಕ ದೇವತೆ ಯಮ ಇಲ್ಲಿ  "ನನ್ನ ಅಪರಾಧವನ್ನು ಕ್ಷಮಿಸು, ನಿನಗೆ ನಮಸ್ಕಾರ" ಎನ್ನುತ್ತಿದ್ದಾನೆ. ಇದು ಹಿರಿಯರ ದೊಡ್ಡ ಗುಣ. ಶ್ರದ್ಧಾವಾನ್ ಲಭತೇ ಜ್ಞಾನಂ ಎಂದು ಕೃಷ್ಣ ಗೀತೆಯಲ್ಲಿ ಹೇಳಿರುವಂತೆ-ಜ್ಞಾನಿಗಳಿಗೆ ಅಪಮಾನ ಮಾಡಿದರೆ ಅದು ಭಗವಂತನನ್ನು ಅಪಮಾನ ಮಾಡಿದಂತೆ. ಜ್ಞಾನಿಗಳು ಭಗವಂತನಿಗೆ ಪರಮ ಪ್ರೀಯರು. ಈ ಕಾರಣದಿಂದ ಜ್ಞಾನಿಯನ್ನು ಕಾಯಿಸಿದ್ದಕ್ಕೆ ಇಲ್ಲಿ ಯಮ ಕ್ಷಮೆ ಕೇಳುತ್ತಿದ್ದಾನೆ.  "ನನಗೆ ಅನಿಷ್ಟವಾಗದಂತೆ ಹರಸು; ಅಷ್ಟೇ ಅಲ್ಲ,  ನಿನ್ನನ್ನು ಮೂರು ದಿನ ಕಾಯಿಸಿದ್ದಕ್ಕೆ ನೀನು ಬಯಸಿದ ಮೂರು ವರವನ್ನು ಕೊಡುತ್ತೇನೆ ಏನು ಬೇಕಾದರೂ ಕೇಳು" ಎನ್ನುತ್ತಾನೆ ಯಮ.

ಶಾಂತಸಂಕಲ್ಪಃ ಸುಮನಾ ಯಥಾ ಸ್ಯಾದ್ ವೀತಮನ್ಯುರ್ಗೌತಮೋ ಮಾSಭಿ ಮೃತ್ಯೋ ।
ತ್ವತ್ಪ್ರಸೃಷ್ಟಂ ಮಾSಭಿವದೇತ್ಪ್ರತೀತ  ಏತತ್ ತ್ರಯಾಣಾಂ ಪ್ರಥಮಂ ವರಂ ವೃಣೇ  ॥೧೦॥

ನಚಿಕೇತ ಯಮನಲ್ಲಿ ಕೇಳುವ ಮೊದಲ ವರವನ್ನು ಈ ಶ್ಲೋಕದಲ್ಲಿ ವರ್ಣಿಸಲಾಗಿದೆ. "ನಾನು ಪುನಃ ನನ್ನ ತಂದೆಗೆ ಮಗನಾಗಿ ಅದೇ ದೇಹದಲ್ಲಿ ಹುಟ್ಟಬೇಕು; ನನ್ನ ತಂದೆ ಸತ್ತು ಬದುಕಿದ ನನ್ನನ್ನು ಗುರುತಿಸಬೇಕು; ನನ್ನನ್ನು ನೋಡಿ ಸಂತೋಷಪಡಬೇಕು; ಒಳ್ಳೆಯ ಮಾತನ್ನಾಡಿ ಸ್ವಾಗತಿಸಬೇಕು; ನನ್ನ ತಂದೆಗೆ 'ಕೆಟ್ಟದ್ದನ್ನು ಮಾಡುವ' ಬಯಕೆ ಎಂದೂ ಬರಬಾರದು; ಆತನ ಮನಸ್ಸು ಸದಾ ಒಳ್ಳೆಯ ಕೆಲಸ ಮಾಡಲು

ಚಡಪಡಿಸಬೇಕು ಮತ್ತು ಆತ ಎಂದೂ ಕೋಪ ಮಾಡಬಾರದು" ಎಂದು ನಚಿಕೇತ ಯಮನನ್ನು ಕೇಳುತ್ತಾನೆ. ಇದು ನಚಿಕೇತ ಕೇಳುವ ಮೊದಲ ವರ.

ಯಥಾ ಪುರಸ್ತಾದ್ ಭವಿತಾ ಪ್ರತೀತಃ   ಔದ್ದಾಲಕಿರಾರುಣಿರ್ಮತ್ಪ್ರಸೃಷ್ಟಃ ।
ಸುಖಂ ರಾತ್ರೀಃ ಶಯಿತಾ ವೀತಮನ್ಯುಃ   ತ್ವಾಂ ದದೃಶಿವಾನ್ ಮೃತ್ಯುಮುಖಾತ್ ಪ್ರಮುಕ್ತಂ ॥ ೧೧॥

ನಚಿಕೇತ ಕೇಳಿದ ವರವನ್ನು ಯಮ ಪುರಸ್ಕರಿಸುತ್ತಾನೆ ಮತ್ತು ಹೇಳುತ್ತಾನೆ: "ನೀನು ಹಿಂದಿರುಗಿ ಹೋದಾಗ ನಿನ್ನ ತಂದೆ ನಿನ್ನನ್ನು ಅಷ್ಟೇ ಸ್ಪಷ್ಟವಾಗಿ ಗುರುತಿಸುತ್ತಾನೆ. ನಿನ್ನನ್ನು ಪ್ರೀತಿಯಿಂದ ಸ್ವಾಗತಿಸುತ್ತಾನೆ. ಮರಳಿ ಹೋದ ನಿನ್ನನ್ನು ಕಂಡ ಮೇಲೆ ಆತನ ಕೋಪ ನಾಶವಾಗಿ ಆತ ಶಾಂತನಾಗುತ್ತಾನೆ ಮತ್ತು ಆತ ರಾತ್ರಿ ಸುಖ ನಿದ್ದೆಯನ್ನು ಪಡೆಯುತ್ತಾನೆ" ಎಂದು.

ಇಲ್ಲಿ ಉದ್ದಾಲಕನನ್ನು ಔದ್ದಾಲಕಿ ಆರುಣಿ ಎಂದು ಕರೆದಿದ್ದಾರೆ. ಔದ್ದಾಲಕಿ ಎಂದರೆ ಉದ್ದಾಲಕನ ಮೊಮ್ಮಗ. ಹಿಂದೆ ಅಜ್ಜನ ಹೆಸರನ್ನು ಮೊಮ್ಮೊಗನಿಗೆ ಇಡುವುದು ಸಂಪ್ರದಾಯವಾಗಿತ್ತು. ಇಲ್ಲಿ ಉದ್ದಾಲಕನ ತಾತನ ಹೆಸರೂ ಉದ್ದಾಲಕ ಎನ್ನುವುದನ್ನು ನಾವು ಗಮನಿಸಬೇಕು. ಅರುಣೆಯ ಮಗ ಹಾಗೂ ಉದ್ದಾಲಕನ ಮೊಮ್ಮಗನಾದ ನಚಿಕೇತನ ತಂದೆ ಔದ್ದಾಲಕಿ ಆರುಣಿ.

ಸ್ವರ್ಗೇ ಲೋಕೇ ನ ಭಯಂ ಕಿಂಚನಾಸ್ತಿ   ನ ತತ್ರ ತ್ವಂ ನ ಜರಯಾ ಬಿಭೇತಿ ।
ಉಭೇ ತೀರ್ತ್ವಾ ಅಶನಾಯಾಪಿಪಾಸೇ   ಶೋಕಾತಿಗೋ ಮೋದತೇ ಸ್ವರ್ಗಲೋಕೇ   ॥ ೧೨॥

ಸ ತ್ವಮಗ್ನಿಂ ಸ್ವರ್ಗ್ಯಮಧ್ಯೇಷಿ ಮೃತ್ಯೋ   ಪ್ರಬ್ರೂಹಿ ತ್ವಂ ಶ್ರದ್ಧಧಾನಾಯ ಮಹ್ಯಂ ।
ಸ್ವರ್ಗಲೋಕಾ ಅಮೃತತ್ವಂ ಭಜಂತ   ಏತದ್ ದ್ವಿತೀಯೇನ ವೃಣೇ ವರೇಣ   ॥೧೩॥

ಇಲ್ಲಿ "ಸ್ವರ್ಗೇ ಲೋಕೇ ನ ಭಯಂ ಕಿಂಚನಾಸ್ತಿ" ಎನ್ನುವಲ್ಲಿ ಬಂದಿರುವ 'ಸ್ವರ್ಗ ಲೋಕ' ಅಂದರೆ ದೇವತೆಗಳಿರುವ ದೇವೇಂದ್ರನ ಲೋಕವಲ್ಲ. ಏಕೆಂದರೆ ಇಲ್ಲಿ 'ನ ಭಯಂ ಕಿಂಚನಾಸ್ತಿ' ಎಂದಿದ್ದಾರೆ. ಅಂದರೆ ಇದು ಯಾವ ಭಯವೂ ಇಲ್ಲದ ಸ್ವರ್ಗಲೋಕ. ದೇವೇಂದ್ರನ ಲೋಕ ಕೇವಲ ತಾತ್ಕಾಲಿಕ ಸುಖವನ್ನು ಅನುಭವಿಸಿ ಭೂಮಿಗೆ ಮರಳುವ ಲೋಕ. ಅಲ್ಲಿ ದೇವತೆಗಳಿಗೂ ಕೂಡ ಪತನದ ಭಯವಿದೆ. ಆದ್ದರಿಂದ ಇಲ್ಲಿ ಹೇಳುವ ಸ್ವರ್ಗಲೋಕ-ಭಗವಂತನ ಲೋಕವಾದ ಮೋಕ್ಷ. ಮೋಕ್ಷದಲ್ಲಿ ಮೃತ್ಯುವಿನ ಭಯವಿಲ್ಲ, ಜರಾ ವ್ಯಾಧಿಯ ಭಯವಿಲ್ಲ. . ಸಹಜವಾಗಿ ಸ್ವರ್ಗ ಇಲ್ಲಿ 'ಸ್ವಃ' ಅಂದರೆ ಎಲ್ಲಾ ಸ್ವರಗಳಿಂದ ವಾಚ್ಯನಾದ ಭಗವಂತನ ರೂಪ. ಸ್ವರಃ ಅಂದರೆ-ಸ್ವಯಮೇವ ರಮತಿ ಇತಿ ಸ್ವರಃ. ಸ್ವಯಂ ಆನಂದಸ್ವರೂಪನಾದ ಭಗವಂತ. ಆತನ ಆನಂದಕ್ಕೆ ಇನ್ನೊಂದು ಸಾಧನ ಅಥವಾ ಅಧಿಷ್ಠಾನ ಬೇಡ. ಇಂಥಹ ಭಗವಂತ ಎಲ್ಲಿ ಸದಾ ಗತನಾಗಿದ್ದಾನೋ ಅದು ಸ್ವರ್ಗಲೋಕ. ಅಂದರೆ ಮುಕ್ತಸ್ಥಾನ. ಇನ್ನೊಂದು

ರೀತಿಯಲ್ಲಿ ಈ ಪದವನ್ನು ಬಿಡಿಸಿದರೆ ಸು+ವ+ರ್ಗ=ಸ್ವರ್ಗ. ಇಲ್ಲಿ ಸುವಃ ಅಂದರೆ ಜ್ಞಾನಾನಂದಸ್ವರೂಪನಾದ ಭಗವಂತ. ಅಂತಹ ಭಗವಂತ ಗತನಾದ ಲೋಕ ಸ್ವರ್ಗಲೋಕ ಅದು ಮೋಕ್ಷ ಸ್ಥಾನ. ಈ ಹಿನ್ನೆಲೆಯನ್ನು ತಿಳಿದು ಈ ಶ್ಲೋಕವನ್ನು ವಿಶ್ಲೇಷಿಸೋಣ.

ಯಮನ ಅನುಗ್ರಹಕ್ಕೆ ಪಾತ್ರನಾದ ನಚಿಕೇತ ಮುಂದುವರಿದು ಹೇಳುತ್ತಾನೆ: "ಮೋಕ್ಷದಲ್ಲಿ ಸಾವಿನ ಭಯವಿಲ್ಲ. ಅಲ್ಲಿ ಹುಟ್ಟು ಸಾವಿನ ನಡುವಿನ ತರಂಗಗಳಾದ ಶೋಕ, ಮೋಹ, ಹಸಿವು, ಬಾಯಾರಿಕೆ, ಮುಪ್ಪು, ರೋಗ ಯಾವುದೂ ಇಲ್ಲದೆ ಎಲ್ಲರೂ ಆನಂದವಾಗಿರುತ್ತಾರೆ ಎಂದು ಕೇಳಿದ್ದೇನೆ. ಸ್ವರ್ಗ ಲೋಕಕ್ಕೆ ಹೋಗಿ ಅಲ್ಲಿಂದ ವೈಕುಂಠಕ್ಕೆ ಹೋಗಬೇಕಾದರೆ ಸ್ವರ್ಗ ನಿಯಾಮಕನಾದ ಮತ್ತು ಅಗ್ನಿಸ್ಥನಾದ ಭಗವಂತನನ್ನು ತಿಳಿದುಕೊಳ್ಳಬೇಕು ಎನ್ನುವ ವಿಚಾರ ಗೊತ್ತಿದೆ. ನೀನು ಮೊಕ್ಷಪ್ರದನಾದ ನಾರಾಯಣನನ್ನು ಉಪಾಸನೆ ಮಾಡಿದ್ದೀಯ. ಈ ಅಗ್ನಿಸ್ಥನಾದ ಭಗವಂತನನ್ನು ನಾನು ಹೇಗೆ ಉಪಾಸನೆ ಮಾಡಬೇಕು-ಅದನ್ನು ಹೇಳು. ನನಗೆ ಶ್ರದ್ಧೆ ಇದೆ. ನಾನು ಶ್ರದ್ಧೆಯಿಂದ ಕೇಳುತ್ತಿದ್ದೇನೆ. ಭಗವಂತನೆಂಬ ಅಮೃತತ್ವವನ್ನು ಉಪಾಸನೆ ಮಾಡಿ, ಸ್ವರ್ಗವನ್ನು ಸೇರಿ ಅಲ್ಲಿ ಸ್ವಲ್ಪ ಕಾಲ ಇದ್ದು, ಆಮೇಲೆ ವೈಕುಂಠವನ್ನು ಸೇರುತ್ತಾರೆ ಎನ್ನುವುದನ್ನು ತಿಳಿದವರು ಹೇಳುತ್ತಾರೆ. ಮೋಕ್ಷ ಸಾಧನೆಗಾಗಿ ಉಪಾಸನೆ ಮಾಡಬೇಕಾದ ಭಗವಂತನನ್ನು ಅಗ್ನಿ ಮುಖದಲ್ಲೇ ಏಕೆ ಉಪಾಸನೆ ಮಾಡಬೇಕು ಮತ್ತು ಹೇಗೆ ಮಾಡಬೇಕು. ಅಗ್ನಿಮುಖದಲ್ಲಿ ಆರಾಧನೆ ಮಾಡುವ, ಅದರ ಹಿಂದಿನ ವಿಜ್ಞಾನ ಮತ್ತು ಉಪಾಸನೆಯ ರಹಸ್ಯವನ್ನು ನನಗೆ ಹೇಳು" ಎಂದು ನಚಿಕೇತ ತನ್ನ ಎರಡನೇ ವರವನ್ನು ಯಮನಲ್ಲಿ ಕೇಳುತ್ತಾನೆ.

ಇಲ್ಲಿ ನಚಿಕೇತ 'ನನಗೆ ಶ್ರದ್ಧೆ ಇದೆ, ನಾನು ಶ್ರದ್ಧೆಯಿಂದ ಕೇಳುತ್ತಿದ್ದೇನೆ' ಎಂದಿದ್ದಾನೆ. ಸಂಸ್ಕೃತದಲ್ಲಿ 'ಶ್ರದ್ಧಾ' ಎನ್ನುವ ಶಬ್ದಕ್ಕೆ ಅಪೂರ್ವವಾದ ಅರ್ಥವಿದೆ. 'ಶ್ರತ್' ಎಂದರೆ ಆಸ್ತಿಕ್ಯ. ಆಸ್ತಿಕ್ಯ ಅಂದರೆ ನಮಗೆ ಗೊತ್ತಿಲ್ಲದ, ನಾವು ಕಾಣದ ಸತ್ಯವೂ ಇದೆ ಅನ್ನುವುದನ್ನು ನಂಬುವುದು. ನಮಗೆ ಯಾವುದು ಗೊತ್ತಿಲ್ಲವೋ, ನಾವು ಯಾವುದನ್ನು ಕಾಣಲಿಲ್ಲವೋ ಅದೂ ಕೂಡ ಈ ಬ್ರಹ್ಮಾಂಡದಲ್ಲಿದೆ, ಇಲ್ಲಿ ನಾವು ಕಂಡದಷ್ಟೇ ಇರುವುದಲ್ಲ ಅನ್ನುವ ನಂಬಿಕೆ ಆಸ್ತಿಕ್ಯ. ಇಂಥಹ ಆಸ್ತಿಕ್ಯವನ್ನು ಹೊಂದಿರುವುದು ಶ್ರದ್ಧಾ. ಶ್ರದ್ಧೆ ಉಳ್ಳವರು ಪರಲೋಕವನ್ನು, ಭಗವಂತನನ್ನು ಎಂದೂ ನಿರಾಕರಣೆ ಮಾಡುವುದಿಲ್ಲ.
ಮುಂದಿನ ಶ್ಲೋಕಕ್ಕೆ ಹೋಗುವ ಮುನ್ನ ಇಲ್ಲಿ ಅಗ್ನಿಯ ಪ್ರತೀಕದಲ್ಲಿ ಭಗವಂತನ ಆರಾಧನೆಯ ಕುರಿತು ವಿಶೇಷವಾಗಿ ನಚಿಕೇತ ಏಕೆ ಪ್ರಶ್ನೆ ಮಾಡಿದ ಎನ್ನುವುದನ್ನು ಒಮ್ಮೆ ವಿಶ್ಲೇಷಿಸೋಣ.

ವೇದದಲ್ಲಿ ಭಗವಂತನ ಆರಾಧನೆಗೆ ಅತ್ಯಂತ ಮುಖ್ಯವಾದ ಪ್ರತೀಕ ಅಗ್ನಿ ಎನ್ನುತ್ತಾರೆ. ಅಗ್ನಿ ಎಂದೂ ಅಪವಿತ್ರವಲ್ಲ. ಅಗ್ನಿ ಸ್ಪರ್ಶದಿಂದ ಅಪವಿತ್ರ ಕೂಡಾ ಪವಿತ್ರವಾಗುತ್ತದೆ. ನಮಗೆ ಭಗವಂತನಿಗೆ ಏನನ್ನಾದರೂ ತಿನ್ನಿಸಬೇಕು ಎನ್ನುವ ಅಭಿಲಾಷೆ ಇದ್ದರೆ ಅದನ್ನು ಕೇವಲ ಅಗ್ನಿ ಮುಖೇನ ಅರ್ಪಿಸಬೇಕು. ನಮ್ಮ ಕಣ್ಣ ಮುಂದೆ ಇರುವ ಎಲ್ಲಾ ಪ್ರತೀಕಗಳಲ್ಲಿ ಅಗ್ನಿ ಅತ್ಯಂತ ಶ್ರೇಷ್ಠ ಎನ್ನುವುದು ವೇದ ಕಾಲದ ಋಷಿಗಳ ತೀರ್ಮಾನ. ಸುಡುವ ಅಗ್ನಿಯಲ್ಲಿ ಅಗ್ನಿದೇವ, ಅವನೊಳಗೆ ಪ್ರಾಣ, ಪ್ರಾಣನೊಳಗೆ ಭಗವಂತ. ಈ ಅನುಸಂಧಾನದಲ್ಲಿ ಅಗ್ನಿಮುಖದಲ್ಲಿ ಮಾಡುವ ಪೂಜೆ ಯಜ್ಞ. ಇದು ಯಜ್ಞ ನಾಮಕ ಭಗವಂತನನ್ನು, ಯಜ್ಞದಿಂದ, ಜ್ಞಾನ ಭಕ್ತಿ

ವೈರಾಗ್ಯದಿಂದ ಕೂಡಿದ ಉತ್ಕೃಷ್ಟವಾದ ಆಹ್ವಾನದಿಂದ ಮಾಡುವ ಆರಾಧನೆ. ಬದುಕಿದ್ದಷ್ಟು ಕಾಲ ಭಗವಂತನನ್ನು ಅಗ್ನಿ ಮುಖದಲ್ಲಿ ಆರಾಧನೆ ಮಾಡುವುದು ನಮ್ಮ ಪ್ರಾಚೀನ ಸಂಪ್ರದಾಯವಾಗಿತ್ತು.

ಒಟ್ಟಿನಲ್ಲಿ ಭಗವಂತನನ್ನು ಅಗ್ನಿ ಪ್ರತೀಕದಲ್ಲಿ ಆರಾಧನೆ ಮಾಡುವುದು ಬಹಳ ಶ್ರೇಷ್ಠ. ಇಲ್ಲಿ ನಚಿಕೇತನಿಗೆ ಭೂಸ್ತರದಲ್ಲಿ ಅಗ್ನಿಹೋತ್ರದ ಮಹತ್ವ ತಿಳಿದಿತ್ತು. ಅದಕ್ಕಾಗಿ ಆತ ಅದರ ಹಿಂದಿನ ವಿಜ್ಞಾನವನ್ನು, ಅಗ್ನಿಮುಖದಲ್ಲಿ ಭಗವಂತನ ಉಪಾಸನೆ ಮಾಡುವ ಪೂರ್ಣ ರಹಸ್ಯವನ್ನು ಹೇಳಿಕೊಡು ಎಂದು ವರಕೇಳಿದ. ನಾವು ಯಾವ ಕ್ರಿಯೆಯನ್ನು ಮಾಡುವುದಾದರೂ ತಿಳಿದು ಮಾಡುವುದು ಬಹಳ ಮುಖ್ಯ. ಸಾಮಾನ್ಯವಾಗಿ ಇಂದು ನಮ್ಮ ಮನೆಗಳಲ್ಲಿ ನಡೆಯುವ ಧಾರ್ಮಿಕ ಕ್ರಿಯೆಗಳನ್ನು ನೋಡಿದರೆ ಅಲ್ಲಿ ತಿಳುವಳಿಕೆ ಇದ್ದು ಮಾಡುವವರು ತುಂಬಾ ವಿರಳ. ತಿಳಿಯದೆ ಮಾಡುವ ಕ್ರಿಯೆ ಮೂಢತನವಾಗಿರುವ ಸಾಧ್ಯತೆ ಬಹಳ ಹೆಚ್ಚು. ತಿಳಿಯದೆ ಹಿಂದಿನವರು ಮಾಡಿಕೊಂಡು ಬಂದ ಸಂಪ್ರದಾಯ ಎಂದು ಕಣ್ಮುಚ್ಚಿ ನಡೆಸಿಕೊಂಡು ಬರುವುದರ ಅಪಾಯವನ್ನು ಒಂದು ಕಥೆಯಲ್ಲಿ ಈ ರೀತಿ ವರ್ಣಿಸಿದ್ದಾರೆ ಒಂದು ಊರಿನಲ್ಲಿ ಒಬ್ಬ ಯುವಕನಿದ್ದ. ಆತನ ತಂದೆ ಒಮ್ಮೆ ತಮ್ಮ ಹಿರಿಯರ ಶ್ರಾದ್ಧ ಮಾಡುತ್ತಿದ್ದರು. ಆ ಸಮಯದಲ್ಲಿ ಮನೆಯಲ್ಲಿದ್ದ ಬೆಕ್ಕು ಅಲ್ಲಿ-ಇಲ್ಲಿ ಬಂದು ತೊಂದರೆ ಕೊಡುತ್ತಿತ್ತು. ಇದನ್ನು ಗಮನಿಸಿದ ಅವರು ಆ ಬೆಕ್ಕನ್ನು ಕಟ್ಟಿ ಹಾಕುವಂತೆ ಮನೆಯವರಿಗೆ ಹೇಳುತ್ತಾರೆ. ಈ ರೀತಿ ಅವರು ಬೆಕ್ಕನ್ನು ಕಟ್ಟಿಹಾಕಿ ಶ್ರಾದ್ಧ ಮಾಡುತ್ತಾರೆ. ಕಾಲಕ್ರಮೇಣ ಯುವಕ ದೊಡ್ಡವನಾದ ಹಾಗೂ ಒಂದು ದಿನ ಆತ ತನ್ನ ತಂದೆಯ ಶ್ರಾದ್ಧ ಮಾಡಬೇಕಾಗಿ ಬಂತು. ಆಗ ಅವರ ಮನೆಯಲ್ಲಿ ಬೆಕ್ಕು ಇರಲಿಲ್ಲ. ಅದಕ್ಕಾಗಿ ಆತ ಎಲ್ಲಿಂದಲೋ ಒಂದು ಬೆಕ್ಕನ್ನು ತಂದು ಕಟ್ಟಿಹಾಕಿಕೊಂಡು ಶ್ರಾದ್ಧ ಮಾಡುತ್ತಾನೆ. ಆತನಿಗೆ ತನ್ನ ತಂದೆ ಏಕೆ ಬೆಕ್ಕನ್ನು ಕಟ್ಟಿ ಹಾಕಿದ್ದರು ಎನ್ನುವುದು ತಿಳಿದಿರಲಿಲ್ಲ. ಆತ ತಿಳಿದುಕೊಂಡಿದ್ದದ್ದು 'ಶ್ರಾದ್ಧ ಮಾಡಬೇಕಾದರೆ ಬೆಕ್ಕನ್ನು ಕಟ್ಟಿಹಾಕಬೇಕು' ಎಂದು!.

ಇಂದು ನಮ್ಮ ಪ್ರತಿಯೊಂದು ಆಚರಣೆಯಲ್ಲಿ ಇಂತಹ ಮೂಢನಂಬಿಕೆಗಳು ತುಂಬಿಹೋಗಿವೆ. ಇದಕ್ಕಾಗಿ ಹಿಂದಿನವರು ಮಾಡಿದ್ದನ್ನು ಏಕೆ ಏನು ಎಂದು ಗೊತ್ತಿಲ್ಲದೆ ಮಾಡಬಾರದು. ಪ್ರತಿಯೊಂದು ಕ್ರಿಯೆಯ ಹಿಂದಿನ ವೈಶಿಷ್ಟ್ಯವನ್ನು ತಿಳಿದು ಮಾಡುವುದು ಬಹಳ ಮುಖ್ಯ. ಈ ಕಾರಣದಿಂದಲೇ ನಚಿಕೇತನ ಪ್ರಶ್ನೆಯನ್ನು ಕೇಳಿ ಯಮನಿಗೆ ಬಹಳ ಸಂತೋಷವಾಯಿತು. ಚಿಕ್ಕ ಹುಡುಗನಾದರೂ ಆತ ತಾನು ತಿಳಿದು ಮಾಡಬೇಕು ಮತ್ತು ಜಗತ್ತಿಗೆ ತಿಳಿಸಬೇಕು ಎನ್ನುವ ಆಸೆಯಿಂದ ಕೇಳಿದ್ದರಿಂದ ಯಮ ಸಂತೋಷದಿಂದ ಆತನ ಪ್ರಶ್ನೆಗೆ ಉತ್ತರಿಸುತ್ತಾನೆ.

ಪ್ರ ತೇ ಬ್ರವೀಮಿ ತದು ಮೇ ನಿಬೋಧಃ ಸ್ವರ್ಗ್ಯಮಗ್ನಿಂ ನಚಿಕೇತಃ ಪ್ರಜಾನನ್ ।
ಅನಂತಲೋಕಾಪ್ತಿಮಥೋ ಪ್ರತಿಷ್ಠಾಂ ವಿದ್ಧಿ ತ್ವಮೇತಂ ನಿಹಿತಂ ಗುಹಾಯಾಮ್ ॥೧೪॥

ನಚಿಕೇತನ ಪ್ರಶ್ನೆಗೆ ಉತ್ತರಿಸುತ್ತಾ ಯಮ ಹೇಳುತ್ತಾನೆ: "ಎಲ್ಲಾ ವಿವರವನ್ನು, ಎಲ್ಲಾ ರಹಸ್ಯವನ್ನು ಬಿಡಿಸಿ ಹೇಳುತ್ತೇನೆ-ಅದನ್ನು ನನ್ನಿಂದ ಕೇಳು" ಎಂದು. ನಮಗೆ ತಿಳಿದಂತೆ ನಾವು ಮಾಡುವ ಕರ್ಮದ ಪಾಪ ಪುಣ್ಯವನ್ನು ಲೆಕ್ಕ ಹಾಕಿ ಅದಕ್ಕನುಗುಣವಾದ ಫಲವನ್ನು ನಿರ್ಧರಿಸುವವ ಯಮ. ಹಾಗಾಗಿ ಕರ್ಮ ಮಾಡುವುದು ಹೇಗೆ, ಅದರ ಹಿಂದಿನ ಅನುಸಂಧಾನ ಹೇಗಿರಬೇಕು, ನಾವು ಮಾಡುವ ಕರ್ಮ

ಮೋಕ್ಷಪ್ರದವಾಗಬೇಕಾದರೆ ಏನು ಮಾಡಬೇಕು-ಇದನ್ನು ನಿಖರವಾಗಿ ಹೇಳಬಲ್ಲವ ಯಮ. ಆದ್ದರಿಂದ "ಅದನ್ನು ನನ್ನಿಂದ ನೇರವಾಗಿ ಕೇಳು" ಎಂದಿದ್ದಾನೆ ಯಮ.

ಈ ಶ್ಲೋಕದಲ್ಲಿ ನಚಿಕೇತ ಮತ್ತು ಯಮ ಇಬ್ಬರಿಗೂ ಅನ್ವಯವಾಗುವ 'ಪ್ರಜಾನನ್' ಎನ್ನುವ ವಿಶೇಷಣ ಬಳಕೆಯಾಗಿದೆ. "ತಿಳುವಳಿಕೆ ಇಲ್ಲದ ಅಪ್ರಬುದ್ಧ ನೀನಲ್ಲ, ಈ 'ಸ್ವರ್ಗ್ಯಗ್ನಿ' ಬಗ್ಗೆ ತಿಳಿದು ಅನುಷ್ಠಾನ ಮಾಡುವ ಯೋಗ್ಯತೆ ಇರುವವ(ಪ್ರಜಾನನ್) ನೀನು. ಆದರೂ ವಿಶೇಷ ತಿಳುವಳಿಕೆಗಾಗಿ ನನ್ನ ಬಳಿ ಕೇಳುತ್ತಿದ್ದೀಯ. ನನಗೆ ಈ ವಿದ್ಯೆ ಚನ್ನಾಗಿ ತಿಳಿದಿದೆ(ಪ್ರಜಾನನ್ ). ಅಂಥಹ ಮೊಕ್ಷಪ್ರದ ಅಗ್ನಿವಿದ್ಯೆಯನ್ನು ನಾನು ನಿನಗೆ ಹೇಳುತ್ತೇನೆ". ಎನ್ನುವ ಧ್ವನಿ ಈ ವಿಶೇಷಣದ ಹಿಂದಿದೆ.

ಮುಂದುವರಿದು ಯಮ ಹೇಳುತ್ತಾನೆ: "ಈ ಅಗ್ನಿ ವಿದ್ಯೆಯನ್ನು ಯಾರು ತಿಳಿಯುತ್ತಾರೆ ಅವರಿಗೆ ಬರಿಯ ಸ್ವರ್ಗ ಪ್ರಾಪ್ತಿ ಮಾತ್ರವಲ್ಲ, ಅನಂತ ಲೋಕ ಪ್ರಾಪ್ತಿಯಾಗುತ್ತದೆ. ಆತ ಸಾವಿಲ್ಲದ ಮೋಕ್ಷವನ್ನು ಸೇರುತ್ತಾನೆ" ಎಂದು. ನಿತ್ಯಲೋಕದ ಪ್ರಾಪ್ತಿಗೆ ಕಾರಣವಾಗುವ ಈ ವಿದ್ಯೆಯ ಪ್ರತಿಪಾದ್ಯ ಭಗವಂತನನ್ನು ಇಲ್ಲಿ 'ಅನಂತಲೋಕಾಪ್ತಿ' ಎಂದು ಸಂಬೋಧಿಸಿದ್ದಾರೆ. ಭಗವಂತ ಅನಂತ ಲೋಕವನ್ನು ಕೊಡುವವನು ಮತ್ತು ಆತ ಎಲ್ಲಾ ಲೋಕಗಳ ಮೂಲಾಧಾರ(ಪ್ರತಿಷ್ಠ). ಸಾಂತವಾದ ಲೋಕವಿರಲಿ, ಅನಂತವಾದ ಲೋಕವಿರಲಿ, ಆ ಲೋಕಕ್ಕೋಸ್ಕರ ಸಾಧನೆ ಮಾಡುವ ಜೀವಜಾತವಿರಲಿ; ಎಲ್ಲವುದರ ಮೂಲಾಧಾರನಾದ, ಅಗ್ನಿಯಲ್ಲಿರತಕ್ಕಂತಹ ಭಗವಂತನ ವಿದ್ಯೆಯನ್ನು ತಿಳಿದು, ಅಗ್ನಿಯಲ್ಲಿ ಆತನ ಉಪಾಸನೆ ಮಾಡಿದರೆ ಅನಂತಲೋಕದ ಆಪ್ತಿಯಾಗುತ್ತದೆ ಮತ್ತು ನಿತ್ಯಲೋಕ ಶಾಶ್ವತವಾಗಿ ಪ್ರಾಪ್ತಿಯಾಗುತ್ತದೆ.

ಭಗವಂತನ ಪ್ರತೀಕದಲ್ಲಿ ಅತ್ಯಂತ ಶ್ರೇಷ್ಠವಾದ ಈ ಅಗ್ನಿ ಎಲ್ಲಿದೆ ಎಂದರೆ- ಇಲ್ಲಿ ಯಮ ಹೇಳುತ್ತಾನೆ: "ವಿದ್ಧಿ ತ್ವಮೇತಂ ನಿಹಿತಂ ಗುಹಾಯಾಮ್" ಎಂದು. ಭಗವಂತ ನಮ್ಮ ಹೃದಯ ಗುಹೆಯಲ್ಲೇ ಇದ್ದಾನೆ. ಕೃಷ್ಣ ಗೀತೆಯಲ್ಲಿ ಇದನ್ನೇ ಹೀಗೆ ಹೇಳಿದ್ದಾನೆ: "ಅಹಂ ವೈಶ್ವಾನರೋ ಭೂತ್ವಾ ಪ್ರಾಣಿನಾಂ ದೇಹಮಾಶ್ರಿತಃ" ಎಂದು. ನಮ್ಮ ದೇಹದಲ್ಲಿ ಅಗ್ನಿ ಅಂತರ್ಗತನಾದ ವೈಶ್ವಾನರ ನಾಮಕ ಭಗವಂತನಿದ್ದಾನೆ. ನಮ್ಮೊಳಗಿದ್ದು ನಮಗೆ ಬದುಕುಕೊಟ್ಟು ರಕ್ಷಣೆ ಮಾಡುವ ಭಗವಂತ ನಮ್ಮ ಹೃದಯದಲ್ಲಿ ಮಾತ್ರವಲ್ಲ ನಮ್ಮ ಸ್ವರೂಪದ ಹೃದಯದಲ್ಲೂ ಇದ್ದಾನೆ. ಈ ಕಾರಣದಿಂದ ಶಾಸ್ತ್ರಕಾರರು ಭಗವಂತನ ಎರಡು ರೂಪಗಳನ್ನು ಈ ರೀತಿ ವರ್ಣಿಸಿದ್ದಾರೆ: "ಆತ್ಮಾಂತರಾತ್ಮೇತಿ ಹರಿಃ ಏಕ ಏವ ದ್ವಿದಾಸ್ಥಿತಃ" ಎಂದು. ದೇಹದ ಹೃದಯದಲ್ಲಿ 'ಆತ್ಮ' ನಾಮಕನಾಗಿ, ದೇಹದ ಹೃದಯದಲ್ಲಿರುವ ಜೀವದ ಹೃದಯದಲ್ಲಿ 'ಅಂತರಾತ್ಮ' ನಾಮಕನಾಗಿ ಭಗವಂತನಿದ್ದಾನೆ. ಈ ಕಾರಣದಿಂದ "ಭಗವಂತನನ್ನು ಬೇರೆಲ್ಲೂ ಹುಡುಕುವುದು ಬೇಡ, ಆತ ನಿಮ್ಮ ಹೃದಯ ಗುಹೆಯಲ್ಲೇ ಇದ್ದಾನೆ" ಎಂದಿದ್ದಾನೆ ಯಮ.

ಹೀಗಾಗಿ ಭಗವಂತನನ್ನು ಅಗ್ನಿಯಲ್ಲಿ ಉಪಾಸನೆ ಮಾಡುವಾಗ ಎಲ್ಲೋ ಹೊರಗಿನಿಂದ ಉಪಾಸನೆ ಮಾಡಬಾರದು. "ಮದ್ ಹೃದಯಸ್ಥಿತಂ, ವೈಶ್ವಾನರ ನಾಮಂ, ಅಗ್ನಿಯಂತರ್ಗತಂ, ಪರಶುರಾಮಂ, ಕುಂಡ ಮಧ್ಯೇ-ಆವಾಹಯಾಮಿ" ಎಂದು -ಹೃದಯದಲ್ಲಿರುವ ಭಗವಂತನನ್ನು ಕುಂಡದಲ್ಲಿ ಆವಾಹನೆ ಮಾಡಿ

ಆರಾಧನೆ ಮಾಡಬೇಕು. ಅದೇ ರೀತಿ ಪ್ರತಿಮೆಯಲ್ಲೂ ಕೂಡ- “ಹೃತ್ಕಮಲಸ್ಥಿತಂ ನಾರಾಯಣಂ ಪ್ರತಿಮಾಯಾಂ ಆವಾಹಯಾಮಿ” ಎಂದು ಆವಾಹನೆ ಮಾಡಿ ಆರಾಧನೆ ಮಾಡಬೇಕು.

ಇಲ್ಲಿ ನಚಿಕೇತನಿಗೆ ಎಲ್ಲಾ ವಿವರವನ್ನೂ ಹೇಳುವುದಾಗಿ ಪ್ರತಿಜ್ಞೆ ಮಾಡಿದ್ದ ಯಮ ಮುಂದೇನು ಹೇಳಿದ ಎನ್ನುವುದನ್ನು ಮುಂದಿನ ಶ್ಲೋಕಗಳಲ್ಲಿ ನೋಡೋಣ.

ಲೋಕಾದಿಮಗ್ನಿಂ ತಮುವಾಚ ತಸ್ಮೈ ಯಾ ಇಷ್ಟಕಾ ಯಾವತೀರ್ವಾ ಯಥಾ ವಾ ।
ಸ ಚಾಪಿ ತತ್ಪ್ರತ್ಯವದದ್ಯಥೋಕ್ತಂ ಅಥಾಸ್ಯ ಮೃತ್ಯುಃ ಪುನರೇವಾಹ ತುಷ್ಟಃ
॥೧೫॥

ತಮಬ್ರವೀತ್ ಪ್ರೀಯಮಾಣೋ ಮಹಾತ್ಮಾ ವರಂ ತವೇಹಾದ್ಯ ದದಾಮಿ ಭೂಯಃ ।
ತವೈವ ನಾಮ್ನಾ ಭವಿತಾऽಯಮಗ್ನಿಃ ಸೃಂಕಾಂ ಚೇಮಾಮನೇಕರೂಪಾಂ ಗೃಹಾಣ ॥೧೬॥

ತ್ರಿಣಾಚಿಕೇತಸ್ತ್ರಿಭಿರೇತ್ಯ ಸಂಧಿಂ ತ್ರಿಕರ್ಮಕೃತ್ತರತಿ ಜನ್ಮಮೃತ್ಯೂ ।
ಬ್ರಹ್ಮಜಜ್ಞಂ ದೇವಮೀಡ್ಯಂ ವಿದಿತ್ವಾ ನಿಚಾಯ್ಯೇಮಾಂ ಶಾಂತಿಮತ್ಯಂತಮೇತಿ ॥೧೭॥

ತ್ರಿಣಾಚಿಕೇತಸ್ತ್ರಯಮೇತದ್ವಿದಿತ್ವಾ ಯ ಏವಂ ವಿದ್ವಾಂಶ್ಚಿನುತೇ ನಾಚಿಕೇತಂ ।
ಸ ಮೃತ್ಯುಪಾಶಾನ್ ಪುರತಃ ಪ್ರಣೋದ್ಯ ಶೋಕಾತಿಗೋ ಮೋದತೇ ಸ್ವರ್ಗಲೋಕೇ ॥೧೮॥

ಏಷ ತೇऽಗ್ನಿರ್ನಚಿಕೇತಃ ಸ್ವರ್ಗ್ಯೋ ಯಮವೃಣೀಥಾ ದ್ವಿತೀಯೇನ ವರೇಣ ।
ಏತಮಗ್ನಿಂ ತವೈವ ಪ್ರವಕ್ಷ್ಯಂತಿ ಜನಾಸಃ ತೃತೀಯಂ ವರಂ ನಚಿಕೇತೋ ವೃಣೀಷ್ವ ॥೧೯॥

ಉಪನಿಷತ್ತಿನಲ್ಲಿರುವ ಈ ಮಂತ್ರಗಳು ಅರ್ಥ ಅನ್ವಯ ಪ್ರಕಾರ ಸ್ವಲ್ಪ ಹಿಂದೆ ಮುಂದೆ ಇರುವುದರಿಂದ, ಮುಂದೆ ಈ ಶ್ಲೋಕಗಳ ಅರ್ಥವಿವರಣೆ ಮಾಡುವಾಗ, ಹೆಚ್ಚು ಸ್ಪಷ್ಟತೆಗಾಗಿ, ಶ್ಲೋಕಗಳ ಅನುಕ್ರಮವನ್ನು ಬದಲಿಸಿ ವಿವರಿಸಿರುವುದನ್ನು ಓದುಗರು ಗಮನಿಸಬೇಕು

“ಲೋಕಾದಿಮಗ್ನಿಂ ತಮುವಾಚ ತಸ್ಮೈ ಯಾ ಇಷ್ಟಕಾ ಯಾವತೀರ್ವಾ ಯಥಾವಾ. ಇಲ್ಲಿ “ಎಲ್ಲಾ ಲೋಕಗಳಿಗೆ ಕಾರಣಕರ್ತ, ಎಲ್ಲಾ ಲೋಕಗಳ ಆದಿ, ಎಲ್ಲಾ ಜೀವಜಾತಕ್ಕೂ ಕಾರಣನಾದ ಅಗ್ನಿನಾರಾಯಣನನ್ನು ನಚಿಕೇತನಿಗೆ ಯಮ ಉಪದೇಶಿಸಿದ” ಎಂದಿದ್ದಾರೆ. ಆದರೆ ಇಲ್ಲಿ ಏನು ಉಪದೇಶಿಸಿದ ಎಂದು ಬಿಡಿಸಿ ಎಲ್ಲಿಯೂ ಹೇಳಿಲ್ಲ. ಅದು ರಹಸ್ಯ. ಅದನ್ನು ನಾವು ಗುರುಮುಖದಲ್ಲಿ ತಿಳಿದುಕೊಳ್ಳಬೇಕು. ಇಲ್ಲಿ “ಯಾ ಇಷ್ಟಕಾ ಯಾವತೀರ್ವಾ ಯಥಾ ವಾ” ಎಂದಿದ್ದಾರೆ. ಅಗ್ನಿಯನ್ನು ಹೊರಗಿನ ಕುಂಡದಲ್ಲಿ ಉಪಾಸನೆ ಮಾಡಬೇಕಿದ್ದರೆ ಅಲ್ಲಿ ಎಷ್ಟು ಇಟ್ಟಿಗೆಗಳನ್ನು ಬಳಸಬೇಕು, ಆ ಇಟ್ಟಿಗೆಗಳಲ್ಲಿ ಏನು

ಅನುಸಂಧಾನವಿರಬೇಕು, ಇಟ್ಟಿಗೆಗಳನ್ನು ಹೇಗೆ ಜೋಡಿಸಬೇಕು, ಇತ್ಯಾದಿಯನ್ನು ಯಮ ನಚಿಕೇತನಿಗೆ ವಿವರಿಸಿದ. ಇಲ್ಲಿ ಈ ಕುರಿತು ನೇರವಾಗಿ ವಿವರವನ್ನು ಹೇಳಿಲ್ಲವಾದ್ದರಿಂದ ನಾವು ಇದರ ಹಿಂದಿರುವ ಗಣಿತವನ್ನು ಸ್ವಲ್ಪ ವಿಶ್ಲೇಷಿಸಬೇಕಾಗುತ್ತದೆ.

ಅಗ್ನಿಕುಂಡದ ಮಧ್ಯದಲ್ಲಿರುವ ಅಗ್ನಿಯಲ್ಲಿ ಮಾತ್ರ ನಾರಾಯಣನಿರುವುದಲ್ಲ, ಆ ಕುಂಡವನ್ನು ರಚನೆ ಮಾಡಲು ಇಟ್ಟ ಇಟ್ಟಿಗೆಯಲ್ಲೂ ಭಗವಂತನ ರೂಪ ಅಡಗಿದೆ. ಇಲ್ಲಿ ಅಗ್ನಿಕುಂಡ ಎನ್ನುವುದು ನಮ್ಮ ಪಿಂಡಾಂಡದ ದ್ಯೋತಕ.

ನಮಗೆ ತಿಳಿದಂತೆ ನಮ್ಮ ಹೃದಯದಲ್ಲಿ ಮಾತ್ರ ಭಗವಂತನಿರುವುದಲ್ಲ, ನಮ್ಮ ಇಡೀ ದೇಹದಲ್ಲಿ ವಿವಿಧ ರೂಪದಲ್ಲಿ ಭಗವಂತನಿದ್ದಾನೆ. ಆದ್ದರಿಂದ ಅಗ್ನಿಹೋತ್ರ ಮಾಡುವಾಗ ಅಗ್ನಿಕುಂಡದ ಒಂದೊಂದು ಇಟ್ಟಿಗೆಯಲ್ಲೂ ಭಗವಂತನಿದ್ದಾನೆ ಎನ್ನುವ ಅನುಸಂಧಾನ ಬಹಳ ಮುಖ್ಯ. ಮೇಲಿನ ಶ್ಲೋಕದಲ್ಲಿ ಬಳಸಲಾದ 'ಇಷ್ಟಕಾ' ಎನ್ನುವ ಪದ ಬಹಳ ರೋಚಕವಾದ ಪದ. ಮೇಲ್ನೋಟಕ್ಕೆ ಇಟ್ಟಿಗೆ ಎನ್ನುವ ಅರ್ಥ ಕೊಡುವ ಈ ಪದಕ್ಕೆ ವಿಶೇಷ ಅರ್ಥವಿದೆ. ನಮಗೆ ಅತ್ಯಂತ ಪ್ರಿಯವಾದ, ಆನಂದಮಯವಾದ ವಸ್ತು-ಇಷ್ಟಕಾ. ಆದ್ದರಿಂದ ಇಲ್ಲಿ 'ಇಷ್ಟಕಾ' ಎನ್ನುವ ಪದ ಬರಿಯ ಇಟ್ಟಿಗೆಯನ್ನು ಹೇಳುವುದಲ್ಲ, ಆ ಇಟ್ಟಿಗೆಯೊಳಗಿನ ಆನಂದಸ್ವರೂಪ ಭಗವಂತನನ್ನು ಹೇಳುತ್ತದೆ.

ಇನ್ನು 'ಯಾವತೀಃ' ಅಂದರೆ ಎಷ್ಟು ಇಟ್ಟಿಗೆಯಿಂದ ಕುಂಡ ಮಾಡಬೇಕು ಮತ್ತು ಯಾವ ರೀತಿ(ಯಥಾ ವಾ) ಉಪಾಸನೆ ಮಾಡಬೇಕು ಎನ್ನುವ ಪ್ರಶ್ನೆ. ಶಾಸ್ತ್ರೀಯವಾಗಿ ಅಗ್ನಿಕುಂಡವನ್ನು ೩೬೦ ಇಟ್ಟಿಗೆಗಳಿಂದ ಮಾಡಬೇಕು. ೩೬೦ ಅನ್ನುವುದು ಒಂದು ವಿಶಿಷ್ಟವಾದ ಸಂಖ್ಯೆ. ಇದರ ಹಿಂದೆ ಮೂರು ವಿಧದ ಉಪಾಸನೆ ಇದೆ. ಅವುಗಳೆಂದರೆ: ಭಗವಂತನನ್ನು ಶರೀರದಲ್ಲಿ ಉಪಾಸನೆ, ಅಗ್ನಿಕುಂಡದಲ್ಲಿ ಉಪಾಸನೆ ಮತ್ತು ಕಾಲದಲ್ಲಿ ಉಪಾಸನೆ. ಶಾಸ್ತ್ರದ ಪ್ರಕಾರ ನಮ್ಮ ದೇಹದಲ್ಲಿ ೩೬೦ ಅಸ್ಥಿಗಳಿವೆ, ಅಷ್ಟೇ ಅಸ್ಥಿಮಜ್ಜೆ ಮತ್ತು ಅಸ್ಥಿಸಂಧಿಗಳಿವೆ. [ಆಧುನಿಕ ವೈದ್ಯ ವಿಜ್ಞಾನ ಸುಮಾರು ೩೦೦ ಅಸ್ಥಿಗಳನ್ನು ಗುರುತಿಸುತ್ತದೆ. ಆದರೆ ಪ್ರಾಚೀನರು ಅಸ್ಥಿಸಂಧಿಗಳನ್ನೆಲ್ಲ ಪರಿಗಣಿಸಿ ೩೬೦ ಎನ್ನುತ್ತಾರೆ]. ಇದರಲ್ಲಿ ಭಗವಂತ ೩೬೦ ರೂಪದಲ್ಲಿ ನೆಲೆಸಿ ನಡೆಸುತ್ತಿದ್ದಾನೆ. ಇದನ್ನೇ ನಾವು ಹೊರಪ್ರಪಂಚದಲ್ಲಿ ಯಜ್ಞಕುಂಡದ ೩೬೦ ಇಟ್ಟಿಗೆಯಲ್ಲಿ ಕಾಣಬೇಕು.

ಇನ್ನು ಕಾಲದಲ್ಲಿ ಭಗವಂತನ ಉಪಾಸನೆ. ಬೇರೆಬೇರೆ ಮಾನದ ಪ್ರಕಾರ ವರ್ಷದಲ್ಲಿನ ದಿನಗಳ ಸಂಖ್ಯೆ ಬೇರೆಬೇರೆ. ಸೌರಮಾನದ ಪ್ರಕಾರ ವರ್ಷಕ್ಕೆ ೩೬೫ ಮತ್ತು ೮/೩೧ ದಿನಗಳು; ಚಾಂದ್ರಮಾನದ ಪ್ರಕಾರ ೩೫೫ ದಿನಗಳು; ನಕ್ಷತ್ರಮಾನದ ಪ್ರಕಾರ ೩೨೪ ದಿನಗಳು; ಬೃಹಸ್ಪತಿಮಾನದ ಪ್ರಕಾರ ೩೯೦ ದಿನಗಳು. ಆದರೆ ಸಾರ್ವತ್ರಿಕವಾಗಿ ಒಂದು ವತ್ಸರ ಎಂದರೆ ೩೬೦ ದಿನಗಳು. ಏಕೆಂದರೆ ೩೬೦ ಡಿಗ್ರಿ(ಕೋನ) ಅಂದರೆ ಒಂದು ಪೂರ್ಣವೃತ್ತ. ಹೀಗೆ ಅಗ್ನಿಕುಂಡದ ೩೬೦ ಇಟ್ಟಿಗೆಗಳಲ್ಲಿ, ದೇಹದ ೩೬೦ ಅಸ್ಥಿಗಳಲ್ಲಿ, ವರ್ಷದ ೩೬೦ ದಿನಗಳಲ್ಲಿ ೧೦೮೦ ರೂಪಗಳಲ್ಲಿ ಭಗವಂತ ನೆಲೆಸಿದ್ದಾನೆ. ನಾವು ವಿಷ್ಣುಸಹಸ್ರನಾಮದಲ್ಲಿನ 'ಚ', 'ಏವ' ಇತ್ಯಾದಿ ಏಕಾಕ್ಷರ ನಾಮಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ನೋಡಿದರೆ ಅಲ್ಲಿ ೧೦೮೦ ನಾಮಗಳನ್ನು

ಕಾಣಬಹುದು. ಇದು ಭಗವಂತನ ಈ ೧೦೮೦ ರೂಪಗಳನ್ನು ಹೇಳುವ ವಿಶಿಷ್ಠನಾಮಗಳು. ಇದಕ್ಕಾಗಿ ವಿಷ್ಣುಸಹಸ್ರನಾಮ ಅಷ್ಟು ಶ್ರೇಷ್ಠ. ಅದನ್ನು ಉಚ್ಛರಿಸಿದಾಗ ಅದರ ಕಂಪನದಿಂದ ನಮ್ಮ ದೇಹದ ರೋಗ ನಾಶವಾಗಿ ಆರೋಗ್ಯ ಸುಧಾರಣೆಯಾಗುತ್ತದೆ ಮತ್ತು ಬದುಕಿನಲ್ಲಿ ಸಮಸ್ಯೆ ಇರುವುದಿಲ್ಲ.

ಹೀಗೆ ಇಲ್ಲಿ ಯಮ- 'ಅಗ್ನಿಯಂತರ್ಗತ ಭಗವಂತ-ಕಾಲದಲ್ಲಿ, ಕುಂಡದಲ್ಲಿ ಮತ್ತು ಪಿಂಡ(ದೇಹ)ದಲ್ಲಿ ನೆಲೆಸಿದ್ದಾನೆ ಎಂದು ತಿಳಿದು ಉಪಾಸನೆ ಮಾಡಬೇಕು' ಎನ್ನುವ ವಿಷಯವನ್ನು ನಚಿಕೇತನಿಗೆ ವಿವರಿಸಿದ. ಇದು ವಿಶ್ವದಲ್ಲಿರುವ ಭಗವಂತನನ್ನು ೩೬೦ ಎನ್ನುವ ಸಂಖ್ಯೆಯಲ್ಲಿ ಅಳವಡಿಸಿ ಮಾಡತಕ್ಕಂತಹ ಒಂದು ಅತ್ಯದ್ಭುತವಾದ ಉಪಾಸನೆ.

ಯಮ ಹೇಳುತ್ತಾನೆ: "ತ್ರಿಣಾಚಿಕೇತಸ್ತ್ರಿಭಿರೇತ್ಯ ಸಂಧಿಂ ತ್ರಿಕರ್ಮಕೃತ್ತರತಿ ಜನ್ಮಮೃತ್ಯೂ ಎಂದು. ಇಲ್ಲಿ ಪ್ರತಿಯೊಬ್ಬನೂ ತ್ರಿಣಾಚಿಕೇತನಾಗಬೇಕು ಎಂದಿದ್ದಾನೆ ಯಮ. ನಚಿಕೇತನ ಮುಖೇನ ಭೂಮಿಗೆ ಪರಿಚಯಿಸಲ್ಪಟ್ಟ ಅಗ್ನಿನಾರಾಯಣನನ್ನು ಮೂರು ಕಡೆ [ಅಗ್ನಿಕುಂಡದಲ್ಲಿ-ಅಗ್ನಿರೂಪ, ಹೃದಯಕುಂಡದಲ್ಲಿ-ವಾಯುರೂಪ, ಕಾಲಕುಂಡದಲ್ಲಿ ಆದಿತ್ಯರೂಪ] ಉಪಾಸನೆ ಮಾಡುವವರು, ಮೂರರ ಜೊತೆಗೆ ಸಂಧಾನ ಮಾಡಿಕೊಂಡು, ಮೂರು ಕರ್ಮಗಳನ್ನು ಮಾಡಿದರೆ(ತ್ರಿಕರ್ಮಕೃತ್), ಆಗ ಜನ್ಮ-ಮೃತ್ಯುವನ್ನು ದಾಟುತ್ತಾರೆ-ಎನ್ನುವುದು ಯಮನ ವಿವರಣೆ. ಇಲ್ಲಿ 'ತ್ರಿರೇತ್ಯ ಸಂಧಿಃ' ಎನ್ನುವಲ್ಲಿ 'ತ್ರಿ' ಎಂದರೆ ಮೂರು ವೇದಗಳು.[ಗದ್ಯರೂಪ, ಪದ್ಯರೂಪ ಮತ್ತು ಗಾನರೂಪದ ಮೂರು ವೇದಗಳು]. ವೇದ ಶಾಖೆಗಳು ಸಂಹಿತೆಗಳು[ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ-ಒಟ್ಟು-೪] ಮತ್ತು ವೇದದ ಉಪಶಾಖೆಗಳು[ಋಗ್ವೇದದಲ್ಲಿ-೨೪, ಯಜುರ್ವೇದದಲ್ಲಿ-೧೦೧, ಸಾಮವೇದದಲ್ಲಿ-೧೦೦೦, ಅಥರ್ವವೇದದಲ್ಲಿ-೧೨. ಒಟ್ಟು-೧೧೩೭] ಅನೇಕ. ಆದರೆ ಅವುಗಳಲ್ಲಿ ಒಂದಕ್ಕೊಂದು ವಿರೋಧವಿಲ್ಲ. ಪ್ರತಿಯೊಂದು ವೇದವೂ ಭಗವಂತನನ್ನು, ಆತನ ಮಹಿಮೆಯನ್ನು ಹೇಳುತ್ತದೆ. ಅದರಲ್ಲಿರುವ ವಿಷಯವನ್ನು ಒಂದಕ್ಕೊಂದು ಸಮನ್ವಯ ಮಾಡಿ ತಿಳಿದುಕೊಳ್ಳುವುದು 'ತ್ರಿರೇತ್ಯ ಸಂಧಿಃ'. ಹೀಗೆ ವೇದದ ಮೂಲಾರ್ಥವನ್ನು ತಿಳಿದುಕೊಂಡು, ದಿನವೂ ಯಜ್ಞ, ದಾನ, ತಪಃ ಎನ್ನುವ ಮೂರು ಕರ್ಮವನ್ನು ಮಾಡಿಕೊಂಡು ಅಗ್ನಿಕಾರ್ಯ ಮಾಡಿದರೆ ಭಗವಂತ ಒಲಿಯುತ್ತಾನೆ.

ಇಲ್ಲಿ ನಮಗೆ ಒಂದು ಪ್ರಶ್ನೆ ಮೂಡಬಹುದು. ಅದೇನೆಂದರೆ ಒಬ್ಬ ಸಾಮಾನ್ಯ ಮನುಷ್ಯನಿಗೆ ದಿನವೂ ಯಜ್ಞ, ದಾನ, ತಪಸ್ಸನ್ನು ಮಾಡಲು ಸಾಧ್ಯವೋ ಎನ್ನುವ ಪ್ರಶ್ನೆ. ಈ ಪ್ರಶ್ನೆಗೆ ಶ್ರೀಕೃಷ್ಣ ಗೀತೆಯಲ್ಲಿ ಬಹಳ ಸುಂದರವಾದ ವಿವರಣೆ ಕೊಟ್ಟಿದ್ದಾನೆ ನಾವು ಮಾಡುವ ಪ್ರತಿಯೊಂದು ಕೆಲಸವೂ ಒಂದು ದೇವರಪೂಜೆ, ಅದು ಭಗವಂತನಿಗೆ ಅರ್ಪಿತವಾಗಿ ಅವನು ಪ್ರೀತನಾಗಲಿ ಎಂದು ಮಾಡುವುದು ಯಜ್ಞ. ನಾನು ಆಡಿದ ಮಾತೆಲ್ಲವೂ ನಿನ್ನ ಸ್ತೋತ್ರವಾಗಲಿ, ನಾನು ನಡೆದ ನಡೆಯಲ್ಲವೂ ನಿನ್ನ ಪ್ರದಕ್ಷಿಣೆಯಾಗಲಿ, ನಾನು ಮಲಗಿದ್ದೆಲ್ಲವೂ ನಿನಗೆ ನಮಸ್ಕಾರವಾಗಲಿ, ನಾನು ಮಾಡುವ ಪ್ರತಿಯೊಂದು ಕರ್ಮವೂ ನಿನಗೆ ಪೂಜೆಯಾಗಲಿ ಎನ್ನುವ ಅನುಸಂಧಾನದಿಂದ ಬದುಕಿದಾಗ ಅದು ಯಜ್ಞವಾಗುತ್ತದೆ.

ಇನ್ನು ಎರಡನೇ ಕರ್ಮ-ದಾನ. ನಮ್ಮಲ್ಲಿಲ್ಲದ್ದನ್ನು ನಾವು ಇನ್ನೊಬ್ಬರಿಗೆ ಕೊಡಲು ಸಾಧ್ಯವಿಲ್ಲ. ಆದರೆ ಯಾರಿಗೆ ಯಾವಾಗ ಯಾವುದರ ಅಗತ್ಯವಿದೆಯೋ, ಅದು ನಮ್ಮಲ್ಲಿದ್ದರೆ, ಅದನ್ನು ನಿಸ್ವಾರ್ಥವಾಗಿ, ಪ್ರಚಾರದ ಬಯಕೆ ಇಲ್ಲದೆ ಕೊಡುವುದು ದಾನ. ಮೂರನೆಯ ಕರ್ಮ-ತಪಸ್ಸು. ದೊಡ್ಡವರಿಗೆ ಗೌರವಕೊಡುವುದು, ಸ್ವಚ್ಛವಾಗಿರುವುದು, ಪ್ರಾಮಾಣಿಕವಾದ ನೇರ ನಡೆ, ಸ್ವಚ್ಛಂದಕಾಮಕ್ಕೆ ಕಡಿವಾಣ(ಬ್ರಹ್ಮಚರ್ಯ), ಇನ್ನೊಬ್ಬರಿಗೆ ತೊಂದರೆಯಾಗದಂತೆ ಬದುಕುವುದು, ಇತ್ಯಾದಿ. ಇದು ನಾವು ದೈನಂದಿನ ಜೀವನದಲ್ಲಿ ಆಚರಿಸಬಹುದಾದ ತಪಸ್ಸು.[ಈ ಮೂರು ಕರ್ಮದ ಕುರಿತ ಹೆಚ್ಚಿನ ವಿವರಣೆಯನ್ನು ಗೀತೆಯ ಹದಿನೇಳನೇ ಅಧ್ಯಾಯದಲ್ಲಿ ವಿವರಿಸಲಾಗಿದೆ.

ಮುಂದುವರಿದು ಯಮ ಹೇಳುತ್ತಾನೆ: "ತ್ರಿಣಾಚಿಕೇತಸ್ತ್ರಯಮೇತದ್ವಿದಿತ್ವಾ ಯ ಏವಂ ವಿದ್ವಾಂಶ್ಚಿನುತೇ ನಾಚಿಕೇತಂ" ಎಂದು. ಅಗ್ನಿಕುಂಡ, ಕಾಲಕುಂಡ, ದೇಹಕುಂಡ ಎನ್ನುವ ಮೂರು ವಿಧವನ್ನು ತಿಳಿದು, ಮೂರು ಬಗೆಯ ನಾಚಿಕೇತಾಗ್ನಿಯ ಉಪಾಸನೆ ಮಾಡುವವನು, ಹಿಂದೆ ಹೇಳಿದ ರೀತಿಯಲ್ಲಿ ಮೂರು ವೇದಗಳನ್ನು ಸಮನ್ವಯಮಾಡಿ ಅರ್ಥ ಮಾಡಿಕೊಂಡು, 'ತ್ರಿಕರ್ಮಕೃತ್' ಆಗಿ, ಅಗ್ನಿಯಲ್ಲಿ ಸ್ಥಿತನಾದ ಅಗ್ನಿನಾರಾಯಣನನ್ನು ಉಪಾಸನೆ ಮಾಡಿದರೆ-ಅಂಥವನು ಮೊದಲು ಸ್ವರ್ಗವನ್ನು ಸೇರಿ, ಅಲ್ಲಿ ಕೆಲಕಾಲ ಇದ್ದು[ಶಾಸ್ತ್ರಕಾರರ ಪ್ರಕಾರ ಕೆಲಕಾಲ ಅಂದರೆ ಒಂದು ಮನ್ವಂತರದಷ್ಟು ದೀರ್ಘಕಾಲ], ಸ್ವರ್ಗಸುಖವನ್ನು ಅನುಭವಿಸಿ, ಆನಂತರ ಅಗ್ನಿಸ್ಥನಾದ ಭಗವಂತನನ್ನು ಉಪಾಸನೆ ಮಾಡಿದ ಫಲವಾಗಿ, ಹುಟ್ಟು-ಸಾವುಗಳ ಎಲ್ಲಾ ಬಂಧವನ್ನು ಕಳಚಿಕೊಂಡು, ನಿತ್ಯಾನಂದ ರೂಪವಾದ, ಸ್ವರೂಪಸುಖವನ್ನು ಕೊಡುವ ಮೋಕ್ಷವನ್ನು ಪಡೆಯುತ್ತಾನೆ.

"ಬ್ರಹ್ಮಜಜ್ಞಂ ದೇವಮೀಡ್ಯಂ ವಿದಿತ್ವಾ ನಿಚಾಯ್ಯೇಮಾಂ ಶಾಂತಿಮತ್ಯಂತಮೇತಿ". ಇಲ್ಲಿ ಯಮ ಭಗವಂತನನ್ನು 'ಬ್ರಹ್ಮಜಜ್ಞ' ಎಂದು ಸಂಬೋಧಿಸಿದ್ದಾನೆ. ಶಬ್ದಗಳಲ್ಲಿ ಬೃಹತ್ ಆದದ್ದು ವೇದ. ಆದ್ದರಿಂದ ಅದು 'ಬ್ರಹ್ಮ'. ವೇದಗಳಿಂದ ಅಭಿವ್ಯಕ್ತನಾಗುವ ಭಗವಂತ 'ಬ್ರಹ್ಮಜ'. ಇಂಥ ಭಗವಂತ ವೇದವೇದ್ಯ. ಎಲ್ಲವನ್ನು ಬಲ್ಲವನು ಆ ಭಗವಂತನೊಬ್ಬನೆ. ಆದ್ದರಿಂದ ವೇದವೇದ್ಯನೂ ಸರ್ವಜ್ಞನೂ ಆದ ಆ ಭಗವಂತ 'ಬ್ರಹ್ಮಜಜ್ಞ'. ಆತನನ್ನು ಎಲ್ಲರೂ ಜಾತಿ ಮತ ಭೇದವಿಲ್ಲದೆ 'ದೇವರು' ಎಂದು ಕರೆಯುತ್ತಾರೆ. ಪ್ರಪಂಚದಲ್ಲಿ ಒಬ್ಬೊಬ್ಬರಿಗೆ ಒಂದೊಂದು ದೇವರಿಲ್ಲ. ಎಲ್ಲರಿಗೂ ದೇವರು ಒಬ್ಬನೆ. ಇದನ್ನು 'ದೇವರು' ಎನ್ನುವ ಪದವೇ ವಿವರಿಸುತ್ತದೆ. 'ದೇವರು' ಎನ್ನುವ ಪದ 'ದಿವು' ಎನ್ನುವ ದಾತುವಿನಿಂದ ಬಂದಿರುವುದು.

ಪ್ರಾಚೀನ ದಾತು ಪಾಠದಲ್ಲಿ ಈ ದಾತುವಿಗೆ ಏಳು ಅರ್ಥವನ್ನು ನೋಡಬಹುದು. ಅವುಗಳೆಂದರೆ:

೧) ಧ್ಯುತಿ

೨) ವಿಜಿಗೀಶ

೩) ಕಾಂತಿ

೪) ಸ್ತುತಿ

೫) ವ್ಯವಹಾರ

೬) ಕ್ರೀಡಾ

೭) ಗತಿಶು.

**೧) ಧ್ಯುತಿ:** ಧ್ಯುತಿ ಅಂದರೆ ಬೆಳಕಿನ ಸ್ವರೂಪ. ಬೆಳಕಿನ ಪುಂಜವಾದ ಸೂರ್ಯಚಂದ್ರಾದಿಗಳಿಗೆ ಬೆಳಕನ್ನೀಯುವ ಭಗವಂತ ನಮ್ಮೊಳಗೆ ಜ್ಞಾನದ ಬೆಳಕನ್ನು ತುಂಬುತ್ತಾನೆ.

**೨) ವಿಜಿಗೀಶ:** ಭಗವಂತ ಎಲ್ಲರಿಗಿಂತ ಎತ್ತರದಲ್ಲಿರುವವನು ಹಾಗೂ ಗೆಲುವಿನ ಸ್ವರೂಪ.

**೩) ಕಾಂತಿ:** ಕೇವಲ ಇಚ್ಛೆಯಿಂದ ಸೃಷ್ಟಿ ಮಾಡಬಲ್ಲವ. ನಮಗೆ ಇಚ್ಛೆಯನ್ನು ಕೊಟ್ಟವ ಹಾಗೂ ಅದನ್ನು ಅವರವರ ಯೋಗ್ಯತೆಗೆ ತಕ್ಕಂತೆ ಪೂರೈಸುವವ.

**೪) ಸ್ತುತಿ:** ಎಲ್ಲರಿಂದ ಸ್ತುತನಾದವನು; ಎಲ್ಲರೂ ಯಾರನ್ನು ಸ್ತುತಿಸುತ್ತಾರೋ ಅವನು ಸರ್ವಶಬ್ದ ವಾಚ್ಯನಾದ ಭಗವಂತ.

**೫) ವ್ಯವಹಾರ:** ಜಗತ್ತಿನ ಸಮಸ್ತ ವ್ಯವಹಾರವನ್ನು ನಿರ್ವಹಿಸುವವ.

**೬) ಕ್ರೀಡಾ:** ಲೀಲಾ ಮಾತ್ರದಿಂದ ಸೃಷ್ಟಿ-ಸ್ಥಿತಿ-ಸಂಹಾರವನ್ನು ನಿಭಾಯಿಸುವವನು ಭಗವಂತ. ಇದು ಆತನಿಗೊಂದು ಕ್ರೀಡೆ.

**೭) ಗತಿಶು:** ಚಲನೆ ಮತ್ತು ಜ್ಞಾನ ಕೊಟ್ಟವ. ಯಾರು ಎಲ್ಲಾ ಕಡೆ ಗತನಾಗಿದ್ದಾನೋ; ಎಲ್ಲವನ್ನೂ ತಿಳಿದಿದ್ದಾನೋ; ಎಲ್ಲರೊಳಗೆ ಬಿಂಬ ರೂಪದಲ್ಲಿ ನೆಲೆಸಿದ್ದಾನೋ ಅವನು 'ದೇವ'
ಹೀಗೆ ಇಚ್ಛಾಮಾತ್ರದಿಂದ ಸೃಷ್ಟಿ ಮಾಡಬಲ್ಲ, ಸತ್ಯಸಂಕಲ್ಪ, ಸರ್ವಗತ, ಸರ್ವಜ್ಞ, ಬೆಳಕುಗಳ ಬೆಳಕಾಗಿ ಜಗತ್ತಿನ ಸರ್ವ ವ್ಯವಹಾರವನ್ನು ನಿರ್ವಹಿಸುವ, ಸರ್ವಶ್ರೇಷ್ಠ ಭಗವಂತ 'ದೇವ'. ಈ ರೀತಿ ಅಗ್ನಿಯಲ್ಲಿರುವ ಭಗವಂತನನ್ನು 'ಬ್ರಹ್ಮಜಜ್ಞಂ ದೇವಮೀಡ್ಯ' ಎಂದು ಉಪಾಸನೆ ಮಾಡಿದರೆ ಸಾವಿಲ್ಲದ, ಸುಖದ ಪರಾಕಾಷ್ಠೆಯಾದ ಮೋಕ್ಷವನ್ನು ಪಡೆಯಬಹುದು ಎಂದು ವಿವರಿಸಿದ ಯಮ ಹೇಳುತ್ತಾನೆ: "ಇದೇ ನಿನ್ನ ಎರಡನೇ ಪ್ರಶ್ನೆಗೆ ಉತ್ತರ.

ಎಲ್ಲವನ್ನು ಬಿಡಿಸಿ ಹೇಳಿದ್ದೇನೆ" ಎಂದು "ಏಷ ತೇಽಗ್ನಿರ್ನಚಿಕೇತಃ ಸ್ವರ್ಗ್ಯೋ ಯಮವೃಣೀಥಾ ದ್ವಿತೀಯೇನ ವರೇಣ
ಇಷ್ಟು ಹೇಳಿ ಯಮ ನಚಿಕೇತನನ್ನು ಉದ್ದೇಶಿಸಿ ಕೇಳುತ್ತಾನೆ ನಾನು ಹೇಳಿದ ವಿಚಾರ ನಿನಗೆ ಸರಿಯಾಗಿ ತಿಳಿಯಿತೋ ಎಂದು. ಇದಕ್ಕೆ ಉತ್ತರಿಸಿದ ನಚಿಕೇತ ಯಮನಿಂದ ಪಡೆದ ಜ್ಞಾನದ ಉಪದೇಶವನ್ನು ಪೂರ್ಣವಾಗಿ ಅನುವಾದಿಸಿದ.

ಈ ಸಂದರ್ಭವನ್ನು ಇಲ್ಲಿ ವಿವರಿಸುತ್ತಾ ಹೇಳುತ್ತಾರೆ: "ಸ ಚಾಪಿ ತತ್ಪ್ರತ್ಯವದದ್ಯಥೋಕ್ತಂ ಅಥಾಸ್ಯ ಮೃತ್ಯುಃ ಪುನರೇವಾಹ ತುಷ್ಟಃ" ಎಂದು. ತಾನು ಹೇಳಿದ ಎಲ್ಲಾ ವಿಚಾರವನ್ನು ಚಾಚೂ ತಪ್ಪದೆ ನಚಿಕೇತ ಗ್ರಹಿಸಿದ್ದನ್ನು ಕಂಡು ಯಮನಿಗೆ ಮಹದಾನಂದವಾಗುತ್ತದೆ. ಈ ಆನಂದದಲ್ಲಿ ಆತ ತಾನು ಮೊದಲು ಪ್ರತಿಜ್ಞೆ ಮಾಡಿದ್ದ ಮೂರು ವರವಲ್ಲದೆ ಇನ್ನೂ ಒಂದು ವರವನ್ನು ಕೊಡಲು ಮುಂದಾಗುತ್ತಾನೆ.

ಇದನ್ನು ವರ್ಣಿಸುತ್ತಾ ಇಲ್ಲಿ ಹೇಳುತ್ತಾರೆ: "ತಮಬ್ರವೀತ್ ಪ್ರೀಯಮಾಣೋ ಮಹಾತ್ಮಾ ವರಂ ತವೇಹಾದ್ಯ ದದಾಮಿ ಭೂಯಃ" ಎಂದು. ಸೂರ್ಯ-ಚಂದ್ರರಿಗೆ ಸಮಾನಸ್ಕಂದನಾದ, ದಿವ್ಯಜ್ಞಾನದ ಬೆಳಕನ್ನು ತುಂಬಿಕೊಂಡಿರುವ, ಮಹಾತ್ಮನಾದ ಯಮ ನಚಿಕೇತನ ಗ್ರಹಣ ಶಕ್ತಿಯನ್ನು ಕಂಡು ಸಂತೋಷಪಟ್ಟು ಇನ್ನೊಂದು ವರವನ್ನು ಅದೇ ಕ್ಷಣದಲ್ಲಿ ತಾನೇ ಉಡುಗೊರೆಯಾಗಿ ಕೊಡುತ್ತಾ ಹೇಳುತ್ತಾನೆ: "ಈ ಅಗ್ನಿ ವಿದ್ಯೆಗೆ ಭೂಮಿಯ ಮೇಲೆ ನಾಚಿಕೇತಾಗ್ನಿ ಎಂದು ಹೆಸರು ಬರಲಿ; ನಿನ್ನ ಹೆಸರಿನಿಂದಲೇ ಈ ಅಗ್ನಿ ಪ್ರಸಿದ್ಧಿಯಾಗಲಿ" ಎಂದು. ಹೀಗೆ ಹೇಳಿ ಯಮ ತನ್ನ ಕೊರಳಿನಿಂದ ಒಂದು ಬಂಗಾರದ ಹಾರವನ್ನು ನಚಿಕೇತನಿಗೆ ಕೊಡಲು ಮುಂದಾಗುತ್ತಾನೆ. [ತವೈವ ನಾಮ್ನಾ ಭವಿತಾಽಯಮಗ್ನಿಃ ಸೃಂಕಾಂ ಚೇಮಾಮನೇಕರೂಪಾಂ ಗೃಹಾಣ" ]. ಇಲ್ಲಿ ಬಂಗಾರದ ಹಾರವನ್ನು 'ಸೃಂಕಾಂ' ಎಂದು ಕರೆದಿದ್ದಾರೆ. ಈ ಪದಕ್ಕೆ ಸಂಸ್ಕೃತದಲ್ಲಿ 'ಸಂಕೋಲೆ' ಎನ್ನುವ ಅರ್ಥವಿದೆ.

ಇದು ಯಮ ನಚಿಕೇತನನ್ನು ಪರೀಕ್ಷಿಸುವ ರೀತಿ. ತನ್ನಿಂದ ಪ್ರಶಂಸೆ ಜೊತೆಗೆ ಚಿನ್ನದ ಹಾರ ದೊರೆತಾಗ, ನಚಿಕೇತ ಚಿನ್ನದ ಆಸೆಗೆ ಬಲಿಬೀಳುತ್ತಾನೋ ಎಂದು ಯಮ ನಚಿಕೇತನನ್ನು ಪರೀಕ್ಷಿಸುತ್ತಿದಾನೆ. ಇದಕ್ಕೆ ನಚಿಕೇತ ಹೇಳಿದನಂತೆ: "ಭೂಮಿ ಮೇಲೆ ಆರಾಧನೆ ಮಾಡತಕ್ಕ ಅಗ್ನಿವಿದ್ಯೆಗೆ ನನ್ನ ಹೆಸರು ಬಂತೆಂದರೆ ಅದು ನನ್ನ ಭಾಗ್ಯ. ಆದರೆ ಬಂಗಾರದ ಸರ ನನಗೆ ಬೇಡ. ಅದು ನಿಮ್ಮಲ್ಲೇ ಇರಲಿ" ಎಂದು. [ನಚಿಕೇತನ